# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಹೊರಗುತ್ತಿಗೆ/ಕಾಲ್ ಸೆಂಟರ್ ತರಬೇತಿ ನೀಡುವ ಯೋಜನೆ–ಮಾರ್ಗಸೂಚಿಗಳು
## BPO/Call Centre Training Scheme-Guidelines

*(18% & BCM)*

### (i) ಕಾರ್ಯಕ್ರಮದ ಉದ್ದೇಶ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ನಿರುದ್ಯೋಗಿ ಯುವಕ / ಯುವತಿಯರು ಸ್ವಾವಲಂಭಿಗಳಾಗಿ ಜೀವನ ನಡೆಸಲು ಅನುಕೂಲ ಮಾಡುವುದು ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

### (ii) ಕಾರ್ಯಕ್ರಮದ ವಿವರಣೆ:

ಬೆಂಗಳೂರು ನಗರದಲ್ಲಿ ಬಿ.ಪಿ.ಓ ಹಾಗೂ ಕಾಲ್ ಸೆಂಟರ್‌ಗಳಲ್ಲಿ ನುರಿತ ಅರ್ಹ ಅಭ್ಯರ್ಥಿಗಳಿಗೆ ಬಹಳ ಬೇಡಿಕೆ ಇರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ನಿರುದ್ಯೋಗಿ ಯುವಕ / ಯುವತಿಯರಿಗೆ ಈ ವಿಷಯಗಳಲ್ಲಿ ಉತ್ತಮ ಬಿ.ಪಿ.ಓ ಮತ್ತು ಕಾಲ್ ಸೆಂಟರ್ ತರಬೇತಿ ಸಂಸ್ಥೆಗಳಿಂದ ತರಬೇತಿಯನ್ನು ನೀಡಲಾಗುವುದು.

ಸದರಿ ತರಬೇತಿಗೆ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ತರಬೇತಿ ಸಂಸ್ಥೆಗಳಿಗೆ ಪಾವತಿಸಲಾಗುವುದು.

### (iii) ಅರ್ಹತೆಗಳು:

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).
b. ಈ ಯೋಜನೆಗೆ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
c. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.
d. ಅಭ್ಯರ್ಥಿಗಳು ಪದವಿದರರಾಗಿರಬೇಕು/ಪದವಿ ಪೂರ್ವ/ಎಸ್.ಎಸ್.ಎಲ್.ಸಿ/ತತ್ಸಮಾನ/ ವಿದ್ಯಾರ್ಹತೆ ಹೊಂದಿರಬೇಕು.
e. ಆಂಗ್ಲಬಾಷೆಯಲ್ಲಿ ಮಾತನಾಡಲು ಸಾಮಾನ್ಯ ಜ್ಞಾನ ಇರಬೇಕು.

f. **ವಾರ್ಷಿಕ ಆದಾಯದ ಮಿತಿ:**

1. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ವಾರ್ಷಿಕ ಆದಾಯ ಮಿತಿ ಇರುವುದಿಲ್ಲ.
2. ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ರೂ.1,00,000/– (ಒಂದು ಲಕ್ಷ ರೂ.) ಗಳ ವಾರ್ಷಿಕ ಆಧಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.
3. ಅಲ್ಪ ಸಂಖ್ಯಾತರಿಗೆ ವಾರ್ಷಿಕ ಆದಾಯ ರೂ.2,00,000/– (ಎರಡು ಲಕ್ಷ ರೂ.) ಗಳ ವಾರ್ಷಿಕ ಆಧಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.

g. ವಯೋಮಿತಿ–ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ–18 ರಿಂದ 40 ವರ್ಷಗಳು. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗ–18 ರಿಂದ 35 ವರ್ಷಗಳು

h. ಈ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸರ್ಕಾರ/ ಸರ್ಕಾರೇತರ/ನಿಗಮ ಹಾಗೂ ಇತರೆ ಸಂಸ್ಥೆಗಳಿಂದ ತರಬೇತಿ ಪಡೆದಿರಬಾರದು.

i. ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸರ್ಕಾರ/ಸರ್ಕಾರೇತರ ಸಂಸ್ಥೆಗಳು, ನಿಗಮಗಳಿಂದ ಉಚಿತವಾಗಿ ತರಬೇತಿಯನ್ನು ಪಡೆದಿರುವುದಿಲ್ಲವೆಂದು ಹಾಗೂ ತರಬೇತಿ ಮದ್ಯದಲ್ಲಿ ಬಿಟ್ಟು ಹೋಗುವುದಿಲ್ಲವೆಂದು ಒಂದು ಬಿಳಿ ಹಾಳೆಯಲ್ಲಿ ಪ್ರಮಾಣೀಕರಿಸಬೇಕು.

## (iv) <u>ಆಯ್ಕೆ ವಿದಾನ:</u>

a. ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗುವುದು.

b. ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

c. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಖಾಂತರ ಫಲಾನುಭವಿಗಳನ್ನು ಗುರುತಿಸುವುದು.

| | | | |
|---|---|---|---|
| **1.** | **ವಲಯ ಅಪರ/ಜಂಟಿ ಆಯುಕ್ತರು** | **–** | **ಅಧ್ಯಕ್ಷರು** |
| **2.** | **ವಲಯ ಉಪ ಆಯುಕ್ತರು** | **–** | **ಉಪಾಧ್ಯಕ್ಷರು** |
| **3.** | **ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ** | **–** | **ಸದಸ್ಯರು** |
| **4.** | **ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ** | **–** | **ಸದಸ್ಯರು** |
| **5.** | **ವಲಯ ಕಲ್ಯಾಣಾಧಿಕಾರಿ** | **–** | **ಸದಸ್ಯರು** |
| **6.** | **ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು** | **–** | **ಸದಸ್ಯ ಕಾರ್ಯದರ್ಶಿ** |

d. ಆಯ್ಕೆ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

e. ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆಪಟ್ಟಿ (ಶೇ.10 ರಷ್ಟು)ನ್ನು ಕಾಯ್ದುಕೊಳ್ಳುವುದು.

f. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

## (v) <u>ಕಾರ್ಯ ಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.</u>

*ವಿಶೇಷ ಆಯುಕ್ತರು (ಆಡಳಿತ)*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

# ಕಲ್ಯಾಣ ವಿಭಾಗದ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ ಕಲ್ಯಾಣ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ **ಕನಕಸಿರಿ** ಯೋಜನೆಯಡಿಯಲ್ಲಿ ಬೈಸೈಕಲ್ ವಿತರಣೆ ಮಾಡುವುದು

**ಅ) <u>ಕಾರ್ಯಕ್ರಮದ ಉದ್ದೇಶ:–</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ನಿರುದ್ಯೋಗಿಗಳಿಗೆ, ಕೂಲಿಕಾರ್ಮಿಕರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಜೀವನ ನಡೆಸಲು ಹಾಗೂ ಈಗಾಗಲೇ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿರುವ ಸ್ವಯಂ ಉದ್ಯೋಗಿಗಳಿಗೆ ಅವರ ವ್ಯಾಪಾರಗಳಲ್ಲಿ ಅನುಕೂಲವಾಗಲು ಅವರಿಗೂ ಸಹ ಪಾಲಿಕೆ ವತಿಯಿಂದ ಉಚಿತವಾಗಿ ಬೈಸೈಕಲ್ ವಿತರಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**ಆ) <u>ಕಾರ್ಯಕ್ರಮದ ವಿವರಣೆ:–</u>**

ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ನಿರುದ್ಯೋಗಿಗಳು/ಸ್ವಯಂ ಉದ್ಯೋಗಿಗಳು, ಕೂಲಿಕಾರ್ಮಿಕರಿಗೆ ಪತ್ರಿಕೆಗಳನ್ನು ವಿತರಿಸುವುದು, ಹಾಲು ವಿತರಣೆ ಮಾಡುವುದು, ತರಕಾರಿ ಮತ್ತು ಹೂವಿನ ವ್ಯಾಪಾರ ಮಾಡಲು, ಎಳನೀರಿನ ವ್ಯಾಪಾರ ಮಾಡಲು ಹಾಗೂ ಇತರೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಜೀವನ ನಡೆಸಲು ಮತ್ತು ಈಗಾಗಲೇ ಸ್ವಯಂ ಉದ್ಯೋಗಿಗಳಾಗಿದ್ದು ಅವರ ವ್ಯಾಪಾರದ ಅನುಕೂಲಕ್ಕಾಗಿ ಪಾಲಿಕೆ ವತಿಯಿಂದ ಉಚಿತವಾಗಿ ಬೈಸೈಕಲ್ ವಿತರಣೆ ಮಾಡಲಾಗುವುದು.

**ಇ) <u>ಅರ್ಹತೆಗಳು:–</u>**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

3) ಕುಟುಂಬದ ವಾರ್ಷಿಕ ಆದಾಯವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸೇರಿದವರಿಗೆ ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು. ಅಥವಾ ಬಿ.ಪಿ.ಎಲ್ ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
5) ಕುಟುಂಬದ ವಾರ್ಷಿಕ ಆದಾಯವು ಹಿಂದುಳಿದ ವರ್ಗದವರಿಗೆ ರೂ.22,000/- ಸಾವಿರ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ರೂ.2.00 ಲಕ್ಷಗಳು ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು.
6) ಅಭ್ಯರ್ಥಿಯ ವಯಸ್ಸು 16 ರಿಂದ 40 ವರ್ಷಗಳಿರಬೇಕು.
7) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಡೀಕರಣವನ್ನು ರೂ.20/-ರ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸದರಿ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.
8) ಅರ್ಜಿದಾರರ ಇತ್ತೀಚಿನ 3 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.

**ಈ) <u>ಅಭ್ಯರ್ಥಿಗಳ ಆಯ್ಕೆ ವಿಧಾನ:-</u>**

i) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

ii) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

iii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

iv) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಸಂಬಂಧಪಟ್ಟ ಸರ್ಕಾರ/ಸರ್ಕಾರದ ನಿಗಮ/ ಮಂಡಳಿ/ಸಂಸ್ಥೆಯ ಪ್ರತಿನಿಧಿಗಳು. | – | ಸದಸ್ಯರು |
| 4. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

v) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

vi) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

vii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

viii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ix) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

**ಉ) <u>ಬೈಸೈಕಲ್ ಉತ್ಪಾದಕರು/ವಿತರಕರು/ಮಾರಾಟಗಾರರು ಸಂಸ್ಥೆಗಳ ಆಯ್ಕೆಯ ವಿಧಾನ:-</u>**

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಡಿಯಲ್ಲಿ ಟೆಂಡರ್ ಕರೆದು ಬೈಸೈಕಲ್‌ಗಳನ್ನು ಖರೀದಿಸುವುದು. ಈ ಕಾರ್ಯಕ್ರಮದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.
2) ಟೆಂಡರ್ ಆಹ್ವಾನಿಸಲು ಟೆಂಡರ್ ಪರಿಶೀಲಿಸಲು ಹಾಗೂ ಟೆಂಡರ್‌ನ್ನು ಅಂಗೀಕರಿಸುವ ಈ ಕೆಳಕಂಡ ಸಮಿತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ವಲಯದ ಸಹಾಯಕ ನಿಯಂತ್ರಕರು (ಹಣಕಾಸು) | – | ಸದಸ್ಯರು |
| 4. ಕಾನೂನು ಕೋಶದ ಒರ್ವ ಪ್ರತಿನಿದಿ | – | ಸದಸ್ಯರು |
| 5.ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**ಅಪರ ಆಯುಕ್ತರು**
**(ಕಲ್ಯಾಣ, ಆರೋಗ್ಯ, ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

## ಶೀ. 22.75 ಅನುದಾನದಡಿಯಲ್ಲಿ-ಮದ್ಯಪಾನ ಅಭ್ಯಾಸ ತ್ಯಜಿಸಲು ಮದ್ಯಪಾನ ನಿಷೇಧ ಕಾರ್ಯಕ್ರಮ

## (De-addiction Programme to Help Chronic Alcohalic recover from the Drinking Habit)

**ಕಾರ್ಯಕ್ರಮದ ಉದ್ದೇಶ:**

ಪ.ಜಾ/ಪ.ಪಂ.ದ ಅನೇಕ ಜನರಲ್ಲಿ ಮದ್ಯಪಾನವು ಒಂದು ಮಾರಕ ಚಟ/ಅಭ್ಯಾಸವಾಗಿದ್ದು, ಇದರಿಂದ ಮನೆಮಂದಿಯೆಲ್ಲಾ ಅದರಲ್ಲೂ ಮುಖ್ಯವಾಗಿ ಹೆಂಗಸರು ಮತ್ತು ಮಕ್ಕಳು ಬಹಳ ತೊಂದರೆಗೀಡಾಗಿ ಇಡೀ ಕುಟುಂಬವು ಸಾಲದ ಕೂಪದಲ್ಲಿ ನೂಕಲ್ಪಡುತ್ತಿರುವುದು ಕಂಡುಬರುತ್ತಿದೆ. ಆದುದರಿಂದ ಮದ್ಯಪಾನ ಅಭ್ಯಾಸದಿಂದ ಅವರನ್ನು ಹೊರತರಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸಾಮಾಜಿಕ ದೃಷ್ಠಿಯಿಂದ ಅತ್ಯುತ್ತಮವಾದ ಕಾರ್ಯಕ್ರಮವಾಗಿರುತ್ತದೆ. ಮದ್ಯಪಾನದಿಂದ ಆಗಬಹುದಾದ ಸಾಮಾಜಿಕ, ಕೌಟುಂಬಿಕ, ಆರೋಗ್ಯದ ಮೇಲಿನ ದುಷ್ಪರಿಣಾಮಗಳನ್ನು ಮದ್ಯವ್ಯಸನಿಗಳಿಗೆ ಮನವರಿಕೆ ಮಾಡಿಕೊಡುವುದು ಮತ್ತು ಮದ್ಯಪಾನ ಚಟದಿಂದ ಹೊರತರುವುದು ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

**ಕಾರ್ಯಕ್ರಮದ ವಿವರಣೆ:**

ಪ.ಜಾ/ಪ.ಪಂ.ದವರು ಹೆಚ್ಚಾಗಿ ವಾಸಿಸುವ ಕೊಳಚೆ ಪ್ರದೇಶಗಳನ್ನು ಈ ಉದ್ದೇಶಕ್ಕಾಗಿ ಆಯ್ಕೆ ಮಾಡಬಹುದಾಗಿದೆ. ಪ್ರತಿ ವಲಯದಲ್ಲಿಯೂ 2 ಅತೀ ಹೆಚ್ಚು ಪ.ಜಾ/ಪ.ಪಂ.ದವರು ವಾಸಿಸುವ ಕಾಲೋನಿ/ಕೊಳಚೆ ಪ್ರದೇಶಗಳನ್ನು ವಲಯಗಳು ಆಯ್ಕೆ ಮಾಡಬಹುದಾಗಿದೆ.

ಈ ಕಾಲೋನಿ/ಕೊಳಚೆ ಪ್ರದೇಶಗಳಲ್ಲಿ ವೈದ್ಯರುಗಳು, ಮನೋರೋಗ ತಜ್ಞರು, ಅಧಿಕಾರಿಗಳು, ಧರ್ಮಗುರುಗಳು, ಸಮಾಜ ವಿಜ್ಞಾನಿಗಳು, ಈ ರೀತಿಯ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಸರ್ಕಾರಿ / ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಓ)ಗಳು ಮತ್ತು ಬೀದಿ ನಾಟಕ ಮಾಡುವ ಗುಂಪುಗಳು, ಸ್ತ್ರೀ ಶಕ್ತಿ ಗುಂಪುಗಳನ್ನು ತೊಡಗಿಸಿಕೊಂಡು ಪ್ರತಿ ವಲಯದಲ್ಲೂ 2 ಕೊಳಚೆ ಪ್ರದೇಶಗಳಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಈಕಾರ್ಯಕ್ರಮದ ಪೋಟೋ/ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಬೇಕು ಈ ಕಾರ್ಯ ಕ್ರಮದ ಉದ್ದೇಶ ಪೂರ್ಣಗೊಳಿಸಲು ಮದ್ಯಪಾನ ವ್ಯಸನಿಗಳು ಈ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಬಾಗವಹಿಸುವಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ.

**ಕಾರ್ಯಕ್ರಮ ನಡೆಸುವ ಸಂಸ್ಥೆಗಳ ಆಯ್ಕೆ ವಿಧಾನ ಮತ್ತು ಅರ್ಹತೆಗಳು:**

- ಕರ್ನಾಟಕ/ಭಾರತ ಸರ್ಕಾರದಿಂದ ನೊಂದಾಯಿತ ಸಂಸ್ಥೆಯಾಗಿರಬೇಕು. ಪ್ರಸಕ್ತ ಸಾಲಿಗೆ ನವೀಕರಿಸಿರಬೇಕು.
- ಕಾರ್ಯಕ್ರಮ ನಡೆಸುವ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇಂದ್ರವನ್ನು ಹೊಂದಿರಬೇಕು.
- ಮದ್ಯಪಾನ ನಿಷೇದ ಅಥವಾ ಸದರಿ ಮಾದರಿಯ ಕಾರ್ಯಕ್ರಮವನ್ನು ಈ ಹಿಂದೆ ನಡೆಸಿರುವ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು
- ಕಳೆದ 3 ಸಾಲಿನ ಆಡಿಟ್ ವರದಿಗಳನ್ನು ನೀಡಬೇಕು.
- ಈ ರೀತಿಯ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಿರುವ ಸಂಸ್ಥೆಗಳಿಗೆ ಆದ್ಯತೆ ನೀಡಬೇಕು.

(ಸಹಿ/-)
*ವಿಶೇಷ ಆಯುಕ್ತರು (ಆಡಳಿತ)*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

# ಕಲ್ಯಾಣ ಇಲಾಖೆಯ ಚಟುವಟಿಕೆಗಳು
## ಶೇ.18ರ ಅನುದಾನದಡಿಯ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು–ಕ್ರಿಯಾಯೋಜನೆ

## ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ.

**ಂ. ಕಾರ್ಯಕ್ರಮದ ಉದ್ದೇಶ.**

ಬೆಂಗಳೂರು ನಗರವು ಸಿಲಿಕಾನ್ ಸಿಟಿ ಹಾಗೂ ಐ.ಟಿ. ಸಿಟಿ ಎಂಬುದಾಗಿ ಪ್ರಖ್ಯಾತಿ ಹೊಂದಿದ್ದು, ಗಣಕಯಂತ್ರ ತರಬೇತಿ ಹೊಂದಿದಲ್ಲಿ ಡಿ.ಟಿ.ಪಿ. ಆಪರೇಟರ್, Computer programmer ,ಕಂಪ್ಯೂಟರ್ ಆಪರೇಟರ್, ಕಾಲ್ ಸೆಂಟರ್‌ಗಳಲ್ಲಿ ಉದ್ಯೋಗ ಗಣಕಯಂತ್ರ ಆಧಾರಿತ ಕೆಲಸ ಕಾರ್ಯಗಳು ಹಾಗೂ ಇತರೆ ಹುದ್ದೆಗಳಲ್ಲಿ ಉದ್ಯೋಗವಕಾಶವು ಹೆಚ್ಚಾಗಿರುತ್ತದೆ. ಆದ್ದರಿಂದ ಪ.ಜಾ/ಪ.ಪಂ ದ ಹಾಗೂ ಹಿಂ.ಅ.ಸಂ. ವರ್ಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಗಣಕಯಂತ್ರ ಸಾಫ್ಟ್‌ವೇರ್ ವಿಷಯದಲ್ಲಿ ತರಬೇತಿ ಹೊಂದಿದ ನಂತರ ಮೇಲ್ಕಂಡ ಹುದ್ದೆಗಳಲ್ಲಿ ತೊಡಗಿಸಿಕೊಂಡು ಅಥವಾ ಸ್ವಯಂ ಉದ್ಯೋಗ ಹೊಂದಲು ಅವಕಾಶ ಇರುತ್ತದೆ. ಇದರಿಂದ ನಿರುದ್ಯೋಗಿಗಳು ಸ್ವಾವಲಂಬಿಗಳಾಗುತ್ತಾರೆ.

**ಃ. ಕಾರ್ಯಕ್ರಮದ ವಿವರಣೆ.**

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಹಳೆಯ 3 ವಲಯಗಳಲ್ಲಿನ 100 ವಾರ್ಡ್‌ಗಳಲ್ಲಿ 13 ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ ಎರಡರಂತೆ ಒಟ್ಟು 26 ಗಣಕಯಂತ್ರ ತರಬೇತಿ ಕೇಂದ್ರಗಳನ್ನು ಖಾಸಗಿ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಶೇ 50:50 ರ ಅನುಪಾತದಲ್ಲಿ ಮೂಲ ಬಂಡವಾಳದೊಂದಿಗೆ ಪ್ರಾರಂಭಿಸಿ ನಡೆಸಲಾಗುತ್ತಿದೆ.

ಈ ಕೇಂದ್ರಗಳಲ್ಲಿ 6 ತಿಂಗಳ ಅವಧಿಯ ಗಣಕಯಂತ್ರ ಸಾಫ್ಟ್‌ವೇರ್ ಟೆಕ್ನಾಲಜಿ (Computer Basics) ಕೋರ್ಸ್ ತರಬೇತಿಯನ್ನು ಒಂದು ತಂಡಕ್ಕೆ ಗರಿಷ್ಠ ಒಟ್ಟು 300 ಅಭ್ಯರ್ಥಿಗಳಿಗೆ ಪರ್ಯಾಯ ದಿನಗಳಂದು ನೀಡಲಾಗುತ್ತಿದೆ. ತರಬೇತಿ ಹೊಂದಿದ ಅಭ್ಯರ್ಥಿಗಳ ತರಬೇತಿ ಶುಲ್ಕ ಪ್ರತಿ ಅಭ್ಯರ್ಥಿಗೆ ರೂ.3,500/- ಗಳಂತೆ ತರಬೇತಿ ನೀಡಿದ ಸಂಸ್ಥೆಗಳಿಗೆ ಪಾವತಿಸಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ 5 ವಲಯಗಳಲ್ಲಿ ಗಣಕಯಂತ್ರ ಸಾಫ್ಟ್‌ವೇರ್ ತರಬೇತಿಯನ್ನು ಟೆಂಡರ್ ಮುಖಾಂತರ ಖಾಸಗಿ ಸಂಸ್ಥೆಗಳನ್ನು ಆಹ್ವಾನಿಸಿ ಗಣಕಯಂತ್ರ ಸಾಫ್ಟ್‌ವೇರ್ ತರಬೇತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ.

**ಅ. ಅರ್ಹತೆಗಳು.**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

2. ಅಭ್ಯರ್ಥಿಯ ವಯಸ್ಸು ಪ.ಜಾ/ಪ.ಪಂ ದವರಿಗೆ 18 ರಿಂದ 40 ಹಾಗೂ ಹಿಂ.ಅ.ಸಂ. ದವರಿಗೆ 18 ರಿಂದ 35ರೊಳಗೆ ವಯೋಮಿತಿ ಇರಬೇಕು(ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಲಗತ್ತಿಸಿರಬೇಕು)

3. ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

4. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

5. ತರಬೇತಿ ಮದ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮದ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ರೂ.20.00 ಛಾಪಾಕಾಗದಲ್ಲಿ ಮುಚ್ಚಳಿಕೆ ಪತ್ರ ಹಾಗೂ ಈ ಹಿಂದೆ ಸದರಿ ಸ್ಪರ್ದಾತ್ಮಕ ಪರೀಕ್ಷೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. <u>ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.</u>

6. ಅರ್ಜಿದಾರರು 5 ಬಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ

**<u>ಆ. ವಾರ್ಷಿಕ ಆದಾಯದ ಮಿತಿ:</u>**

4. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ವಾರ್ಷಿಕ ರೂ.1–00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.
5. ಆದಾಯ ಪ್ರವರ್ಗ–1ನ್ನು ಹೊರತು ಪಡಿಸಿ ಇತರೆ ಹಿಂದುಳಿದ ವರ್ಗದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ.22,000/– (ಇಪ್ಪತ್ತೆರಡು ಸಾವಿರ ರೂಪಾಯಿಗಳು) ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.
6. ಅಲ್ಪ ಸಂಖ್ಯಾತರಿಗೆ ವಾರ್ಷಿಕ ಆದಾಯ ರೂ. 2–00ಲಕ್ಷ (ಎರಡು ಲಕ್ಷ ರೂಪಾಯಿಗಳು) ಒಳಗಿರಬೇಕು.

**<u>ಇ. ಆಯ್ಕೆ ವಿಧಾನ:</u>**

**a)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ಕಛೇರಿಗಳಿಂದ ಗಣಕಯಂತ್ರ ಸಾಫ್ಟ್‌ವೇರ್ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡಲಾಗುವುದು.

**b)** ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**c)** ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ

ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

d) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

**ವಲಯ ಜಂಟಿ ಆಯುಕ್ತರು – ಅಧ್ಯಕ್ಷರು**
**ವಲಯ ಉಪ ಆಯುಕ್ತರು – ಉಪಾಧ್ಯಕ್ಷರು**
**ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ – ಸದಸ್ಯರು**
**ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು –ಸದಸ್ಯ ಕಾರ್ಯದರ್ಶಿ**

e) ನಿಗದಿತ ದಿನದೊಳಗಾಗಿ ಅರ್ಜಿ ಸಲ್ಲಿಸಿದವರ ಒಂದು ಮೆರಿಟ್ ಲಿಸ್ಟ್‌ನ್ನು ಆಯಾ ಪರೀಕ್ಷೆಗಳ ಕ್ವಾಲಿಫೈಯಿಂಗ್ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ಆಧರಿಸಿ ತಯಾರಿಸುವುದು.

f) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸುವಾಗ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.

g) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

h) ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

i) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

j) ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

k) ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**<u>ಈ. ತರಬೇತಿಯ ವಿವರಗಳು:</u>**

a. ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.
b. ತರಬೇತಿ ನೀಡುವ ಸಂಸ್ಥೆಯು ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕು.
c. ತರಬೇತಿಯ ನಂತರ ಅಂತಿಮ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

**<u>ಊ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.</u>**

**ಸಹಿ/-**
**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## ಮಹಿಳಾ ಕಲ್ಯಾಣ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳು

### <u>ಹೊಸ ವಾರ್ಡ್‌ಗಳಲ್ಲಿ ಖಾಸಗಿಯಾಗಿ ಹೊಲಿಗೆ ತರಬೇತಿ ಪಡೆದ ತರಬೇತುದಾರರಿಗೆ ಹೊಲಿಗೆ ಯಂತ್ರಗಳ ವಿತರಣೆ ಕಾರ್ಯಕ್ರಮ – ಮಾರ್ಗಸೂಚಿಗಳು</u>

### <u>(Distribution of Tailoring Machine's to the Tailoring Trainees Trained in Private Institution's Under New Wards)</u>

**ಅ) <u>ಕಾರ್ಯಕ್ರಮದ ಉದ್ದೇಶ:–</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೊಸ ವಾರ್ಡ್‌ಗಳ ಪ್ರದೇಶಗಳಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಖಾಸಗಿ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಮಹಿಳೆಯರಿಗೆ ಪಾಲಿಕೆಯಿಂದ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಿ ಅವುರುಗಳು ಸ್ವಾವಲಂಬಿಗಳಾಗಲು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**ಆ) <u>ಕಾರ್ಯಕ್ರಮದ ವಿವರಣೆ:–</u>**

ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸ ವಾರ್ಡ್‌ಗಳ ಪ್ರದೇಶಗಳಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಖಾಸಗಿ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಮಹಿಳೆಯರಿಗೆ ಪಾಲಿಕೆಯಿಂದ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಗುವುದು. ಅಂದರೆ ಪಾಲಿಕೆಯಿಂದ ನಡೆಸಲಾಗುತ್ತಿರುವ ಹೊಲಿಗೆ ತರಬೇತಿ ಕೇಂದ್ರಗಳಿರುವ ವಾರ್ಡ್‌ಗಳನ್ನು ಹೊರತು ಪಡಿಸಿ ಪಾಲಿಕೆಗೆ ಸೇರ್ಪಡೆಯಾದ ಹೊಸದಾದ ಪ್ರದೇಶಗಳಲ್ಲಿನ ವಾರ್ಡ್‌ಗಳ ನಿವಾಸಿಗಳಿಗೆ ಮಾತ್ರ ಅನ್ವಯವಾಗುತ್ತದೆ.

**ಇ) <u>ಅರ್ಹತೆಗಳು:–</u>**

9) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಾರ್ಡ್‌ಗಳ ಪ್ರದೇಶಗಳ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
10) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

11) ಕುಟುಂಬದ ವಾರ್ಷಿಕ ಆದಾಯವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸೇರಿದವರಿಗೆ ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು. ಅಥವಾ ಬಿ.ಪಿ.ಎಲ್ ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.

12) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹೊಂದಿರುವ ಬಗ್ಗೆ ಪ್ರಮಾಣ ಪತ್ರವನ್ನು ಒದಗಿಸಬೇಕು.

13) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.

14) ಕುಟುಂಬದ ವಾರ್ಷಿಕ ಆದಾಯವು ಹಿಂದುಳಿದ ವರ್ಗದವರಿಗೆ ರೂ.22,000/- ಸಾವಿರ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ರೂ.2.00 ಲಕ್ಷಗಳು ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು.

15) ಅಭ್ಯರ್ಥಿಯ ವಯಸ್ಸು 16 ರಿಂದ 40 ವರ್ಷಗಳಿರಬೇಕು.

16) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಡೀಕರಣವನ್ನು ರೂ.20/-ರ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸದರಿ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.

17) ಅರ್ಜಿದಾರರ ಇತ್ತೀಚಿನ 3 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.

ಉ) <u>ಅಭ್ಯರ್ಥಿಗಳ ಆಯ್ಕೆ ವಿಧಾನ:-</u>

x) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

xi) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

xii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xiii) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | - | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | - | ಉಪಾಧ್ಯಕ್ಷರು |
| 3. ಸಂಬಂಧಪಟ್ಟ ಸರ್ಕಾರ/ಸರ್ಕಾರದ ನಿಗಮ/ ಮಂಡಳಿ/ಸಂಸ್ಥೆಯ ಪ್ರತಿನಿಧಿಗಳು. | - | ಸದಸ್ಯರು |
| 4. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | - | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | - | ಸದಸ್ಯ ಕಾರ್ಯದರ್ಶಿ |

xiv) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xv) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xvi) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xvii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xviii) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

## ಉ) <u>ಹೊಲಿಗೆಯಂತ್ರಗಳ ಉತ್ಪಾದಕರು/ವಿತರಕರು/ಮಾರಾಟಗಾರರು ಸಂಸ್ಥೆಗಳ ಆಯ್ಕೆಯ ವಿಧಾನ:-</u>

3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಡಿಯಲ್ಲಿ ಟೆಂಡರ್ ಕರೆದು ಹೊಲಿಗೆಯಂತ್ರಗಳನ್ನು ಖರೀದಿಸುವುದು. ಈ ಕಾರ್ಯಕ್ರಮದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.
4) ಟೆಂಡರ್ ಆಹ್ವಾನಿಸಲು ಟೆಂಡರ್ ಪರಿಶೀಲಿಸಲು ಹಾಗೂ ಟೆಂಡರ್‌ನ್ನು ಅಂಗೀಕರಿಸುವ ಈ ಕೆಳಕಂಡ ಸಮಿತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ವಲಯದ ಸಹಾಯಕ ನಿಯಂತ್ರಕರು (ಹಣಕಾಸು) | – | ಸದಸ್ಯರು |
| 4. ಕಾನೂನು ಕೋಶದ ಒರ್ವ ಪ್ರತಿನಿದಿ | – | ಸದಸ್ಯರು |
| 5.ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**ಅಪರ ಆಯುಕ್ತರು**
**(ಕಲ್ಯಾಣ, ಆರೋಗ್ಯ, ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ.18ರ ಅನುದಾನದಡಿಯ ಕಾರ್ಯಕ್ರಮಗಳು

### ಸರ್ಕಾರದಿಂದ ಅಂಗೀಕೃತಗೊಂಡಿರುವ ವಸತಿ ಶಾಲೆಗಳಲ್ಲಿರುವ ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ಸಹಾಯ – ಮಾರ್ಗಸೂಚಿಗಳು

### A. ಕಾರ್ಯಕ್ರಮದ ಉದ್ದೇಶ:–

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕುಟುಂಬದ ಪ್ರತಿಭಾವಂತ ಮಕ್ಕಳು ಸರ್ಕಾರದಿಂದ ಅಂಗೀಕೃತಗೊಂಡಿರುವ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ/ವ್ಯಾಸಂಗಕ್ಕೆ ಸೇರುವವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಆರ್ಥಿಕ ಸಹಾಯವನ್ನು ನೀಡಲಾಗುವುದು.

### B. ಕಾರ್ಯಕ್ರಮದ ವಿವರಣೆ:–

ಪ್ರತಿಷ್ಠಿತ ಶಾಲೆಗಳಾದಂತಹ ಶ್ರೀ ರಾಮಕೃಷ್ಣ ವಿದ್ಯಾಲಯ, ಮೈಸೂರು, ಶ್ರೀ ಆದಿಚುಂಚನಗಿರಿ ಸಂಸ್ಥಾನದ ವಸತಿ ಶಾಲೆ, ಚೆನ್ನೇನಹಳ್ಳಿ ವಸತಿ ಶಾಲೆ, ಮುದ್ದೇನಹಳ್ಳಿ ವಸತಿ ಶಾಲೆ ಹಾಗೂ ಇತರೆ ಪ್ರತಿಷ್ಠಿತ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಡುತ್ತಿರುವ ಅಥವಾ ವ್ಯಾಸಂಗಕ್ಕೆ ಸೇರಲು ಬಯಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರತಿಭಾವಂತ ಮಕ್ಕಳಿಗೆ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಿಗಧಿಪಡಿಸಿರುವ ವರ್ಷಕ್ಕೆ ಗರಿಷ್ಠ ರೂ.50,000/– ಗಳಿಗೆ ಸೀಮಿತಗೊಳಿಸಿ, ಸಂಪೂರ್ಣ ವೆಚ್ಚವನ್ನು ಭರಿಸಲಾಗುವುದು.

### C. ಅರ್ಹತೆಗಳು:–

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

ಆ) ಅಭ್ಯರ್ಥಿಯ ಕನಿಷ್ಠ ವಿದ್ಯಾರ್ಹತೆ 5ನೇ ತರಗತಿ ಹಾಗೂ ಗರಿಷ್ಠ 10ನೇ ತರಗತಿ ವ್ಯಾಸಂಗ ಮಾಡುತ್ತಿರಬೇಕು. (ವ್ಯಾಸಂಗದ ದೃಢೀಕರಣ ಪತ್ರವನ್ನು ನೀಡಬೇಕು)

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಈ) ವಸತಿ ಶಾಲೆಯಲ್ಲಿನ ವ್ಯಾಸಂಗದ ಮಧ್ಯೆ ಬಿಡದಿರುವ ಬಗ್ಗೆ/ವ್ಯಾಸಂಗವನ್ನು ಮಧ್ಯದಲ್ಲೇ ಬಿಟ್ಟರೆ ವ್ಯಾಸಂಗಕ್ಕಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ಹಾಗೂ ಈ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸಂಸ್ಥೆಗಳಿಂದ ಪಡೆಯದೆ ಇರುವ ಬಗ್ಗೆ  ಪೋಷಕರಿಂದ ರೂ.20.00 ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದವರು ವ್ಯಾಸಂಗಕ್ಕೆ ಅರ್ಹರಾಗಿರುವುದಿಲ್ಲ.

ಉ) ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.__(ಗುರುತಿನ ಚೀಟಿ,ವಲಯ ಕಛೇರಿಯ ರಿಜಿಸ್ಟರ್, ವಸತಿ ಶಾಲೆಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

ಊ) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1,00,000/– ಲಕ್ಷದೊಳಗಿರಬೇಕು.
ಋ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

**2ನೇ ಪುಟಕ್ಕೆ**

---



## D. ಆಯ್ಕೆ ವಿಧಾನ:–

ಅ) ವ್ಯಾಸಂಗಕ್ಕೆ ಸಂಬಂಧಪಟ್ಟ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದಲ್ಲಿ ಪ್ರವೇಶ ಪಡೆಯತಕ್ಕದ್ದು.
ಆ) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.
ಇ) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.
ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ– ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ – ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.
ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.
ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.
ಎ) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.
ಏ) ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ವಸತಿ ಶಾಲೆಗಳಿಗೆ ಪ್ರಥಮ ವಾರದಲ್ಲಿ ವ್ಯಾಸಂಗಕ್ಕೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ವಸತಿ ಶಾಲೆಗೆ ನಿಯೋಜಿಸುವುದು.

## E. ವ್ಯಾಸಂಗದ ವಿವರಗಳು:–

ಅ) ಅಭ್ಯರ್ಥಿಯು ಶೇ.90ಕ್ಕೂ ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.

ಆ) ಅಭ್ಯರ್ಥಿಯು ವ್ಯಾಸಂಗ ಪಡೆಯುತ್ತಿರುವ ವಸತಿ ಶಾಲೆಗಳಲ್ಲಿ ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

ಇ) ವ್ಯಾಸಂಗದ ನಂತರ ಸಂಬಂಧಿತ ವಾರ್ಷಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

ಈ) ಅಭ್ಯರ್ಥಿಯು ವಾರ್ಷಿಕ ಪರೀಕ್ಷೆಯ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಗೂ ಉತ್ತೀರ್ಣರಾದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪಾಲಿಕೆಯ ವಲಯ ಕಛೇರಿಗೆ ಕಡ್ಡಾಯವಾಗಿ ನೀಡಬೇಕು.

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ**
**ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

### ವಿದ್ಯಾಭ್ಯಾಸವನ್ನು ಅಪೂರ್ಣಗೊಳಸಿರುವ ಶಾಲಾ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ (ಪ್ರೇರಣೆ) :- ಮಾರ್ಗಸೂಚಿಗಳು

### Educational Programmes for School Drop outs (Motivation)

### A) ಕಾರ್ಯಕ್ರಮದ ಉದ್ದೇಶ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಾಸಿಸುತ್ತಿರುವ ಆರ್ಥಿಕ ಸಂಕಷ್ಟದಲ್ಲಿರುವ ಕಡುಬಡತನ ಕುಟುಂಬಗಳಾದ ಹೋಟೆಲ್ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೂಲಿ ಕೆಲಸಗಳನ್ನು ಹಾಗೂ ಇತ್ಯಾದಿ ಕಸುಬು/ವೃತ್ತಿಗಳಲ್ಲಿ ತೊಡಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪೋಷಕರ ಮಕ್ಕಳು ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿದ್ದಲ್ಲಿ ಅವರುಗಳನ್ನು ಸರ್ಕಾರೇತರ ಸಂಸ್ಥೆಗಳ ಮುಖಾಂತರ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರುಗಳನ್ನು ಮತ್ತೆ ವಿದ್ಯಾಭ್ಯಾಸದಲ್ಲಿ ಮುಂದುವರೆಸುವಂತೆ ಮಾಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

### B) ಕಾರ್ಯಕ್ರಮದ ವಿವರಣೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರೇತರ ಸಂಸ್ಥೆಗಳು ಆರ್ಥಿಕ ಸಂಕಷ್ಟದಲ್ಲಿರುವ ಕಡುಬಡತನ ಕುಟುಂಬಗಳಾದ ಹೋಟೆಲ್ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೂಲಿ ಕೆಲಸಗಳನ್ನು ಹಾಗೂ ಇತ್ಯಾದಿಗಳ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪೋಷಕರ ಮಕ್ಕಳನ್ನು ಗುರುತಿಸಿ ಅವರುಗಳಿಗೆ ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿರುವ ಸರ್ವಶಿಕ್ಷಣ ಅಭಿಯಾನದ ಮಾದರಿಯಂತೆ ವಿಶೇಷ ಶಾಲೆಗಳನ್ನು ನಡೆಸಲಾಗುವುದು. ಇದನ್ನು ರಾಷ್ಟ್ರೀಯ ಮಕ್ಕಳ ಕಾರ್ಮಿಕರ ಯೋಜನೆಯಂತೆ ಕಾರ್ಯ ರೂಪಕ್ಕೆ ತರುವುದು.

### C) ಅರ್ಹತೆಗಳು:-

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2. ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ್ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.
3. ಕರ್ನಾಟಕ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ವಿವಿಧ ಯೋಜನೆಗಳಿಗೆ ಕುರಿತಂತೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ವಯ ಕುಟುಂಬದ ವಾರ್ಷಿಕ ಆದಾಯದ ಮಿತಿಗೊಳಪಟ್ಟಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳ ಪ್ರತಿಗಳನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು ಸಲ್ಲಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬದವರ ಮಕ್ಕಳು ಅರ್ಹರಾಗಿರುತ್ತಾರೆ.

4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು.
5. ಸಂಸ್ಥೆಗಳು ಗುರುತಿಸಿರುವ ಮಕ್ಕಳ 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು. ಸಂಸ್ಥೆಗಳು ಗುರುತಿಸಿರುವ ಮಕ್ಕಳ ಪಟ್ಟಿಯನ್ನು ದಾಖಲಾತಿಗಳೊಂದಿಗೆ ಅನುಮೋದನೆಗೆ ವಲಯ ಕಛೇರಿಗಳಿಗೆ ಸಲ್ಲಿಸಬೇಕು.
6. ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
7. ಮಕ್ಕಳ ವಯಸ್ಸು 18ರ ಮಿತಿಯಲ್ಲಿರಬೇಕು.
8. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## D) ಸರ್ಕಾರೇತರ ಸಂಸ್ಥೆಗಳಲ್ಲಿ ಇರಬೇಕಾದ ಅರ್ಹತೆಗಳು:-

1) ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿರುವ ಶಾಲಾ ಮಕ್ಕಳಿಗೆ ಈ ಹಿಂದೆ ಪ್ರೇರಣೆಯನ್ನು ನೀಡಿ ಅವರುಗಳನ್ನು ಮತ್ತೊಮ್ಮೆ ವಿದ್ಯಾಭ್ಯಾಸದಲ್ಲಿ ತೊಡಗುವಂತೆ ಮಾಡಿರುವ ಅನುಭವ ಹೊಂದಿರಬೇಕು. (ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸಬೇಕು)
2) ಈ ಹಿಂದೆ ಸರ್ಕಾರದ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಈ ರೀತಿಯ ಕಾರ್ಯಾದೇಶವನ್ನು ಪಡೆದು ಯಶಸ್ವಿಯಾಗಿ ಕಾರ್ಯಕ್ರಮವನ್ನು ಪೂರ್ಣಗೊಳಿಸಿರುವುದಕ್ಕೆ ದಾಖಲೆಗಳನ್ನು ಒದಗಿಸಬೇಕು.
3) ಈ ರೀತಿಯ ಶೈಕ್ಷಣಿಕ ಕಾರ್ಯಕ್ರಮ ನಡೆಸಿ, ಮಕ್ಕಳನ್ನು ಪ್ರೇರೇಪಿಸಲು ಸೇವಾ ಮನೋಭಾವ ಹೊಂದಿರಬೇಕು.
4) ಸರ್ಕಾರೇತರ ಸಂಸ್ಥೆಗಳು ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಪ್ರತಿ ಆರ್ಥಿಕ ವರ್ಷಕ್ಕೆ ರೂ.10.00 ಲಕ್ಷಗಳ ವಹಿವಾಟು ನಡೆಸಿರಬೇಕು.
5) ಸದರಿ ಸಂಸ್ಥೆಯು ಕನ್ನಡ ಭಾಷೆಯನ್ನು ತಿಳಿದಿರುವ ಶಿಕ್ಷಕರುಗಳನ್ನು ನಿಯೋಜಿಸಿಕೊಂಡು ಸರ್ಕಾರದ "ಮರಳಿ ಬಾ ಶಾಲೆಗೆ" ಯೋಜನೆಯಂತೆ ಅನುಷ್ಠಾನಗೊಳಿಸುವುದು.

## E) ಆಯ್ಕೆ ವಿಧಾನ:-

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಡಿಯಲ್ಲಿ ಟೆಂಡರ್‌ಗಳನ್ನು ಕರೆದು ಸಂಸ್ಥೆಗಳನ್ನು ಆಯ್ಕೆ ಮಾಡುವುದು.
2) ಟೆಂಡರ್ ಆಹ್ವಾನಿಸಲು, ಟೆಂಡರ್ ಪರಿಶೀಲಿಸಲು ಹಾಗೂ ಟೆಂಡರ್‌ನ್ನು ಅಂಗೀಕರಿಸುವ ಈ ಕೆಳಕಂಡ ಸಮಿತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಕ್ಷೇತ್ರ ಶಿಕ್ಷಣಾಧಿಕಾರಿಗಳು | – | ಸದಸ್ಯರು |
| 5. ವಲಯದ ಸಹಾಯಕ ನಿಯಂತ್ರಕರು (ಹಣಕಾಸು) | – | ಸದಸ್ಯರು |
| 6. ಜಿಲ್ಲಾ/ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 7. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಾರ್ಯಕ್ರಮಗಳು

## ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಶಾಲಾ/ಕಾಲೇಜುಗಳಿಗೆ ಆರ್ಥಿಕ ಸಹಾಯ– ಮಾರ್ಗಸೂಚಿ

## Financial Support to the Schools/Colleges for conducting Evening Special Classes to SC/ST Students.

### A) ಕಾರ್ಯಕ್ರಮದ ಉದ್ದೇಶ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಅಥವಾ ಸರ್ಕಾರದ ಅನುದಾನಿತ ಶಾಲೆಗಳು/ಕಾಲೇಜುಗಳಲ್ಲಿ ಕ್ರಮವಾಗಿ 10ನೇ ತರಗತಿ/ದ್ವಿತೀಯ ಪಿ.ಯು.ಸಿ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಜೆ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಪಾಲಿಕೆಯಿಂದ ಆರ್ಥಿಕ ಸಹಾಯವನ್ನು ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ವಿದ್ಯಾರ್ಥಿಗಳ ಅವಧಿಯಲ್ಲಿ ಎಸ್.ಎಸ್.ಎಲ್.ಸಿ. (10ನೇ ತರಗತಿ) ಹಾಗೂ ದ್ವಿತೀಯ ಪಿ.ಯು.ಸಿ. ತರಗತಿಗಳು ಬಹುಮುಖ್ಯ ಘಟ್ಟವಾಗಿರುವುದರಿಂದ ಅವರುಗಳಿಗೆ ವಿಶೇಷ ತರಗತಿಗಳನ್ನು ನೀಡಿದ್ದಲ್ಲಿ, ಅವರುಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿದಂತಾಗುತ್ತದೆ.

### B) ಕಾರ್ಯಕ್ರಮದ ವಿವರಣೆ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಾರಿ ಅಥವಾ ಸರ್ಕಾರದ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಎಸ್.ಎಸ್.ಎಲ್.ಸಿ., ಅಥವಾ ದ್ವಿತೀಯ ಪಿ.ಯು.ಸಿ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರಿಣಿತ ಶಾಲಾ ಶಿಕ್ಷಕರುಗಳು ಹಾಗೂ ಉಪನ್ಯಾಸಕರುಗಳಿಂದ ಸಂಜೆ ವೇಳೆಯಲ್ಲಿ ವಿಶೇಷ ತರಗತಿಗಳನ್ನು ನಡೆಸಿ ಅವರುಗಳಿಗೆ ಸಂಭಾವನೆಯನ್ನು ನೀಡಿ ಪಾಲಿಕೆಯಿಂದ ಭರಿಸಲಾಗುವುದು. ಸದರಿ ವಿಶೇಷ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಇಸ್ಕಾನ್ ಸಂಸ್ಥೆಯಿಂದ ರಾತ್ರಿಯ ಊಟವನ್ನು ಪೂರೈಸಲಾಗವುದು.

### C) ಅರ್ಹತೆಗಳು:–

1) ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸುವ ಸರ್ಕಾರಿ/ಸರ್ಕಾರದ ಅನುದಾನಿತ ಶಾಲಾ/ಕಾಲೇಜುಗಳು ಪಾಲಿಕೆ ವ್ಯಾಪ್ತಿಯಲ್ಲಿರಬೇಕು ಹಾಗೂ ವಿದ್ಯಾರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

3) ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.
5) ವಿದ್ಯಾರ್ಥಿಗಳು ಸಂಜೆ ವೇಳೆಯ ತರಗತಿಗಳನ್ನು ನಡೆಸುತ್ತಿರುವ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು. (ಸಂಬಂಧಪಟ್ಟ ಶಾಲಾ ಕಾಲೇಜುಗಳ ಮುಖ್ಯಸ್ಥರುಗಳು/ಪ್ರಾಂಶುಪಾಲರುಗಳಿಂದ ದೃಢೀಕರಣ ಸಲ್ಲಿಸಬೇಕು)
6) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.
7) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ಧೃಡೀಕರಣವನ್ನು ಬಿಳಿ ಹಾಳೆಯಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ವಿಶೇಷ ತರಗತಿಗೆ ಅರ್ಹರಾಗಿರುವುದಿಲ್ಲ.
8) ಶಾಲಾ/ಕಾಲೇಜು ಮುಖ್ಯಸ್ಥರ ಅನುಮೋದಿತ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ಕ್ರಮಕೈಗೊಳ್ಳುವುದು.
9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## D) ಆಯ್ಕೆ ವಿಧಾನ:–

1) ವಲಯ ಕಛೇರಿಗಳಿಂದ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಸಂಪರ್ಕಿಸಿ ಸಂಜೆಯ ವೇಳೆಯ ತರಗತಿಗಳನ್ನು ನಡೆಸುವ ಶಾಲಾ/ಕಾಲೇಜುಗಳನ್ನು ಗುರುತಿಸುವುದು.
2) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.
3) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
4) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಶಾಲಾ ಕಾಲೇಜುಗಳನ್ನು ಗುರುತಿಸಿ, ವಿದ್ಯಾರ್ಥಿಗಳ ಪಟ್ಟಿಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

## E) <u>ಕಾರ್ಯ ವಿಧಾನ:–</u>

1) ಪರಿಣಿತ ಶಾಲಾ ಶಿಕ್ಷಕರುಗಳು ಹಾಗೂ ಕಾಲೇಜುಗಳ ಉಪನ್ಯಾಸಕರುಗಳಿಂದ ಸಂಬಂಧಪಟ್ಟ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳಲ್ಲು ವಿಶೇಷ ತರಗತಿಗಳನ್ನು ನಡೆಸುವುದು.
2) ವಿಶೇಷ ತರಗತಿಗಳನ್ನು ಸಂಜೆಯ ವೇಳೆಯಲ್ಲಿ 6.00 ಗಂಟೆಯಿಂದ 8.00 ಗಂಟೆಯವರೆಗೆ ನಡೆಸುವುದು.
3) ವಿಶೇಷ ತರಗತಿಗಳಿಗೆ ಪಾಠ ಹೇಳುವ ಶಿಕ್ಷಕರುಗಳು ಅಥವಾ ಭೋದನೆ ಮಾಡುವ ಉಪನ್ಯಾಸಕರುಗಳಿಗೆ ಪಾಲಿಕೆಯಿಂದ ಸಂಭಾವನೆಯನ್ನು ಪಾವತಿ ಮಾಡಲಾಗುವುದು.
4) ವಿಶೇಷ ತರಗತಿಗಳು ಮುಗಿದ ನಂತರ ಇಸ್ಕಾನ್ ಸಂಸ್ಥೆಯಿಂದ ವಿಶೇಷ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ರಾತ್ರಿಯ ಊಟವನ್ನು ಪೂರೈಸುವುದು.
5) ವಲಯದ ಕಲ್ಯಾಣಾಧಿಕಾರಿಗಳು ಶಾಲಾ/ಕಾಲೇಜುಗಳನ್ನು ಸ್ಥಳ ಪರಿಶೀಲಿಸಿ, ಶಾಲಾ/ಕಾಲೇಜುಗಳಲ್ಲಿ ಸಂಜೆಯ ವೇಳೆಯ ವಿಶೇಷ ತರಗತಿಗಳನ್ನು ನಡೆಸಿರುವ ಕುರಿತು ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಕೂಲಂಕುಶವಾದ ವರದಿಯನ್ನು ಸಲ್ಲಿಸುವುದು.
6) ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳು ಹಾಗೂ ಪ್ರಾಂಶುಪಾಲರುಗಳು ಪ್ರತಿ ತಿಂಗಳು ಮಾಸಿಕ ಪರೀಕ್ಷೆಯನ್ನು ನಡೆಸಿ ಅದರ ವರದಿಯನ್ನು ವಲಯ ಕಛೇರಿಗಳಿಗೆ ಸಲ್ಲಿಸುವುದು.
7) ಆಯಾ ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳಿಂದ ಸಂಜೆ ವೇಳೆಯ ವಿಶೇಷ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ 10ನೇ/ದ್ವಿತೀಯ ಪಿ.ಯು.ಸಿ. ತರಗತಿಯ ಅಂತಿಮ ಫಲಿತಾಂಶದ ವಿವರಗಳನ್ನು ಸಂಬಂಧಪಟ್ಟ ವಲಯ ಕಛೇರಿಗಳಿಗೆ ಸಲ್ಲಿಸತಕ್ಕದ್ದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

## ನೇಮಕಾತಿ ಪ್ರಾಧಿಕಾರ ಹಾಗೂ ಇತರೇ ಹುದ್ದೆಗಳ ನೇಮಕಾತಿಗಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ಆರ್ಥಿಕ ಸಹಾಯ

## Financial Assistance to the Candidates attending to interviews for Appointment

**ಕಾರ್ಯಕ್ರಮದ ಉದ್ದೇಶ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರಾಜ್ಯ/ ಕೇಂದ್ರ ಸರ್ಕಾರದ/ ಸರ್ಕಾರಿ ಸ್ವಾಮ್ಯದ ವಿವಿಧ ಇಲಾಖೆಗಳು ಮತ್ತು ನೇಮಕಾತಿ ಪ್ರಾಧಿಕಾರಗಳು ಕರೆದಿರುವ ಹುದ್ದೆಗಳ ನೇಮಕಾತಿಗೆ ಹಾಜರಾಗಲು ಅನುಕೂಲವಾಗುವಂತೆ ಆರ್ಥಿಕ ಸಹಾಯ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**ಕಾರ್ಯಕ್ರಮದ ವಿವರಣೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಡಕ್ಕೆ ಸೇರಿದ ಅಭ್ಯರ್ಥಿಗಳು ಪಾಲಿಕೆಯ ವ್ಯಾಪ್ತಿಯನ್ನು ಹೊರತುಪಡಿಸಿ, ಇತರೆ ತಾಲ್ಲೂಕು/ಜಿಲ್ಲೆ /ರಾಜ್ಯ /ಕೇಂದ್ರ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವಿವಿಧ ಇಲಾಖೆಗಳು ಮತ್ತು ನೇಮಕಾತಿ ಪ್ರಾಧಿಕಾರಗಳು ಕರೆದಿರುವ ಹುದ್ದೆಗಳ ನೇಮಕಾತಿಗಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ಸದರಿ ಸ್ಥಳಗಳಿಗೆ ಹೋಗಿ ಬರಲು ಬಸ್ ಅಥವಾ ರೈಲು ಪ್ರಯಾಣದ ಎರಡನೇ ದರ್ಜೆಯ ವೆಚ್ಚವನ್ನು ಭರಿಸಲಾಗುವುದು. ಈ ರೀತಿ ಪ್ರಯಾಣ ಬೆಳೆಸಲು ಹೋಗಿ ಬರಲು ಪ್ರಯಾಣದ ವೆಚ್ಚಗಳನ್ನು, ದಾಖಲಾತಿಗಳನ್ನು ಹಾಗೂ ನೇಮಕಾತಿ ಸಂದರ್ಶನದ ಹಾಜರಾತಿಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ಅದರ ವೆಚ್ಚವನ್ನು ಮರು ಪಾವತಿಯನ್ನು ಮಾಡಲಾಗುವುದು.

**ಅರ್ಹತೆಗಳು:-**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

**2ನೇ ಪುಟಕ್ಕೆ ----**

2) ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
3) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
4) ಅಭ್ಯರ್ಥಿಗಳ ವಯಸ್ಸು ರಾಜ್ಯ/ಕೇಂದ್ರ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ನೇಮಕಾತಿ ಪ್ರಾಧಿಕಾರಗಳು ಕರೆದಿರುವ ಹುದ್ದೆಗಳ ನೇಮಕಾತಿಗಾಗಿ ನಿಗದಿಪಡಿಸಿರುವಂತೆ ವಯೋಮಿತಿಯಲ್ಲಿರಬೇಕು.
5) ಸರ್ಕಾರದ ಸಂಸ್ಥೆಗಳು ಅಥವಾ ನೇಮಕಾತಿ ಪ್ರಾಧಿಕಾರದಿಂದ ನೇಮಕಾತಿಗಾಗಿ ಸಂದರ್ಶನಕ್ಕೆ ಹಾಜರಾಗಲು ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕು.
6) ಅಭ್ಯರ್ಥಿಗಳ ಕುಟುಂಬಗಳ ಅದಾಯ ರೂ.1.00 ಲಕ್ಷದ ಮಿತಿಯಲ್ಲಿರಬೇಕು / ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
7) ಅಭ್ಯರ್ಥಿಯು ಪಾಲಿಕೆಯ ವ್ಯಾಪ್ತಿಯನ್ನು ಹೊರತುಪಡಿಸಿ, ಇತರೆ ತಾಲ್ಲೂಕು/ಜಿಲ್ಲೆ/ರಾಜ್ಯ ಹಾಗೂ ರಾಷ್ಟ್ರದ ಯಾವುದೇ ಸ್ಥಳಕ್ಕೆ ಸಂದರ್ಶನಕ್ಕೆ ಹಾಜರಾಗಲು ಆಗುವ ಬಸ್ ಹಾಗೂ ಎರಡನೇ ದರ್ಜೆ ರೈಲು ಪ್ರಯಾಣಕ್ಕೆ ಈಗಾಗಲೇ ಖರ್ಚಾಗಿರುವ ಪ್ರಯಾಣದ ಚೀಟಿಯ ವೆಚ್ಚದ ದಾಖಲಾತಿಯನ್ನು ಹಾಜರು ಪಡಿಸಬೇಕು.
8) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳು ಹಾಜರಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
9) ಈ ಸೌಲಭ್ಯವನ್ನು ಸರ್ಕಾರ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆಯದೇ ಇರುವ ಬಗ್ಗೆ ಬಿಳಿ ಹಾಳೆಯಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.
10) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
11) ಅರ್ಜಿದಾರರ ಇತ್ತೀಚಿನ 2 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.
12) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**ಆಯ್ಕೆ ವಿಧಾನ:-**

i) ವಲಯ ಕಚೇರಿಗಳಿಂದ ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಹ ವಿದ್ಯಾರ್ಥಿಗಳಿಂದ ಆಹ್ವಾನಿಸುವುದು ಅಥವ ನೇಮಕಾತಿ ಪ್ರಾಧಿಕಾರ ಹಾಗೂ ಇತರೆ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನಕ್ಕೆ ಆಹ್ವಾನಿಸಿದ ಸಮಯದಲ್ಲಿ ಅರ್ಜಿಗಳನ್ನು ವಿತರಿಸುವುದು.
ii) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ಗುರಿಯನ್ನು ನಿಗಧಿ ಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**3ನೇ ಪುಟಕ್ಕೆ ----**

III) ಅರ್ಹ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವಲಯ ಕಚೇರಿಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಸಂಬಂದಪಟ್ಟ ವಲಯ ಕಛೇರಿಗಳಿಗೆ ಹಿಂತಿರುಗಿಸುವುದು.

iv) ವಲಯವಾರು ಅಪರ / ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಜಿಲ್ಲಾ/ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

v) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

vi) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

vii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

viii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ix) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ನೇಮಕಾತಿಗಾಗಿ ಹಾಜರಾಗದಿದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ**
**ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

## ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ – ಮಾರ್ಗಸೂಚಿಗಳು

## Financial Assistance to Students for Higher Education in Foreign Universities

**F) ಕಾರ್ಯಕ್ರಮದ ಉದ್ದೇಶ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಪಾಲಿಕೆಯಿಂದ ಆರ್ಥಿಕ ಸಹಾಯ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಇದರಿಂದ ಸದರಿ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಿದಂತಾಗುತ್ತದೆ.

**G) ಕಾರ್ಯಕ್ರಮದ ವಿವರಣೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳಾದಂತಹ ಎಂ.ಎಸ್. ಎಂ.ಫಿಲ್., ಎಂ.ಟೆಕ್., ಪಿ.ಹೆಚ್.ಡಿ., ಹಾಗೂ ಇತ್ಯಾದಿ ವಿದೇಶಿ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಕರ್ನಾಟಕ ಸರ್ಕಾರ, ಸಮಾಜ ಕಲ್ಯಾಣ ಇಲಾಖೆಯು ನಿಗಧಿಪಡಿಸಿರುವಂತೆ ಪಾಲಿಕೆಯಿಂದ ಆರ್ಥಿಕ ಸಹಾಯವನ್ನು ನೀಡಲಾಗುವುದು.

**H) ಅರ್ಹತೆಗಳು:-**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2. ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.
3. ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್., ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**2ನೇ ಪುಟಕ್ಕೆ ---**

5. ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಗಳಾದಂತಹ ಎಂ.ಎಸ್., ಎಂ.ಫಿಲ್., ಎಂ.ಟೆಕ್., ಪಿ.ಹೆಚ್.ಡಿ., ಹಾಗೂ ಇತ್ಯಾದಿ ವಿದೇಶಿ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಪ್ರವೇಶ ಪರೀಕ್ಷೆಗಳಲ್ಲಿ ಆಯ್ಕೆ ಆಗಿರಬೇಕು. (ಆಯ್ಕೆ ಪತ್ರವನ್ನು ಒದಗಿಸತಕ್ಕದ್ದು)
6. ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವುದಕ್ಕೆ ಅಥವಾ ಸದರಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವುದಕ್ಕೆ ಅದರ ದಾಖಲಾ ಪ್ರತಿಗಳನ್ನು ಸಲ್ಲಿಸತಕ್ಕದ್ದು.
7. ವಿದ್ಯಾರ್ಥಿಗಳಿಗೆ ವೀಸಾ ಮಂಜೂರಾಗಿರುವುದಕ್ಕೆ ಮತ್ತು ಪಾಸ್‌ಪೋರ್ಟ್ ಹೊಂದಿರುವುದಕ್ಕೆ ಅದರ ದಾಖಲೆ ಪ್ರತಿಗಳನ್ನು ಒದಗಿಸತಕ್ಕದ್ದು.
8. ಈ ಮೇಲೆ ತಿಳಿಸಿರುವಂತಹ ಉನ್ನತ ವ್ಯಾಸಂಗದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅದರ ಶೈಕ್ಷಣಿಕ ವೆಚ್ಚ ಹಾಗೂ ವಸತಿಯ ವೆಚ್ಚಗಳನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಆದೇಶಗಳನ್ವಯ ಪಾಲಿಕೆಯಿಂದ ಭರಿಸಲಾಗುವುದು.
9. ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ನಿಗಧಿಪಡಿಸಿದ ವ್ಯಾಸಂಗದ ವೆಚ್ಚದ ವಾರ್ಷಿಕ ಗರಿಷ್ಠ ಮೊತ್ತಕ್ಕೆ ಮಿತಿಗೊಳಿಸಿದೆ.
10. ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಡೀಕರಣವನ್ನು ರೂ.20/-ರ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸಹಾಯ ಧನಕ್ಕೆ ಅರ್ಹರಾಗಿರುವುದಿಲ್ಲ.
11. ಅರ್ಜಿದಾರರ ಇತ್ತೀಚಿನ 5 ಭಾವ ಚಿತ್ರಗಳನ್ನು ಅರ್ಜಿ ಜೊತೆಯಲ್ಲಿ ನೀಡಬೇಕು.
12. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## I) <u>ಆಯ್ಕೆ ವಿಧಾನ:-</u>

xix) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು ಅಥವ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಆಯ್ಕೆಯಾಗಿ ಪ್ರವೇಶ ಪಡೆದ ನಂತರ ಅರ್ಜಿಗಳನ್ನು ಸ್ವೀಕರಿಸುವುದು.

xx) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

xxi) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xxii) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

**3ನೇ ಪುಟಕ್ಕೆ ---**

xxiii) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಕ್ಷೇತ್ರ ಶಿಕ್ಷಣಾಧಿಕಾರಿ / ಉಪ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | – | ಸದಸ್ಯರು |
| 5. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

xxiv) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xxv) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xxvi) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xxvii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xxviii) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್ ಗಳನ್ನು ನಿರ್ಮಿಸಲು - ಮಾರ್ಗಸೂಚಿಗಳು:-**
**Grants for construction of Working Women's Hostel for SC/ST's**

A) **ಕಾರ್ಯಕ್ರಮದ ಉದ್ಧೇಶ:-**

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸ್ವಾಧೀನದಲ್ಲಿರುವ ಬಿ.ಡಿ.ಎ./ ನಗರ ಪಾಲಿಕೆ ಹಾಗೂ ಇತರೆ ಸರ್ಕಾರದ ಸಂಸ್ಥೆಗಳ ಸರ್ಕಾರದ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯೋಗಸ್ಧ ಮಹಿಳೆಯರಿಗೆ ಹೊಸದಾಗಿ ವಸತಿ ನಿಲಯಗಳನ್ನು ಪಾಲಿಕೆ ವತಿಯಿಂದ ನಿರ್ಮಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

B) **ಕಾರ್ಯಕ್ರಮದ ವಿವರಣೆ:-**

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸ್ವಾಧೀನದಲ್ಲಿರುವ ಬಿ.ಡಿ.ಎ./ನಗರ ಪಾಲಿಕೆ ಹಾಗೂ ಇತರೆ ಸರ್ಕಾರದ ಸಂಸ್ಥೆಗಳ ಸರ್ಕಾರದ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯೋಗಸ್ಧ ಮಹಿಳೆಯರಿಗೆ ಪಾಲಿಕೆಯ ಮುಖ್ಯ ಅಭಿಯಂತರು (ಕಲ್ಯಾಣ) ರವರ ಕಚೇರಿಯಿಂದ ನಿವೇಶನಗಳನ್ನು ಗುರುತಿಸಿ, ನಿವೇಶನದ ದಾಖಲಾತಿಗಳನ್ನು ಪರಿಶೀಲಿಸಿ ವಸತಿ ನಿಲಯಗಳ ಅಂದಾಜು ವೆಚ್ಚವನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಅವುಗಳನ್ನು ನಿರ್ಮಿಸುವುದು. ಈ ಕಾರ್ಯಕ್ರಮವನ್ನು ಮುಖ್ಯ ಅಭಿಯಂತರರು (ಕಲ್ಯಾಣ) ಅಥವಾ ವಲಯ ಮುಖ್ಯ ಅಭಿಯಂತರರುಗಳ ಕಛೇರಿಗಳಿಂದ ಅನುಷ್ಠಾನ ಮಾಡುವುದು.

C) ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಲಾ / ಕಾಲೇಜು ಮಕ್ಕಳಿಗೆ ಆರೋಗ್ಯ ವಿಮೆ - ಮಾರ್ಗಸೂಚಿಗಳು:-**
**(Health Insurance to SC/ST Students studying in Schools & Colleges)**

**A) ಕಾರ್ಯಕ್ರಮದ ಉದ್ಧೇಶ:-**

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ/ಸರ್ಕಾರದ ಅನುದಾನಿತ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಆರೋಗ್ಯವನ್ನು ಕಾಪಾಡುವ ಸಲುವಾಗಿ ಆರೋಗ್ಯ ವಿಮೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕುಟುಂಬದ ಮಕ್ಕಳಿಗೆ ಅನಾರೋಗ್ಯ ಪೀಡಿತರಾಗಿದ್ದಲ್ಲಿ ಅವರ ಖರ್ಚು ವೆಚ್ಚಗಳನ್ನು ಭರಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**B) ಕಾರ್ಯಕ್ರಮದ ವಿವರಣೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಖಾಸಗಿ ವಿಮಾ ಸಂಸ್ಥೆಗಳೊಂದಿಗೆ ಜಂಟಿಯಾಗಿ ಕಾರ್ಯಕ್ರಮ ಹಮ್ಮಿಕೊಂಡು ನಗರ ಪಾಲಿಕೆಯಿಂದ ಸರ್ಕಾರಿ/ ಸರ್ಕಾರದ ಅನುದಾನಿತ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲಾ / ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರೀಮಿಯಮ್ ಹಣವನ್ನು ಪಾವತಿಸಲಾಗುವುದು. ಈ ಬಗ್ಗೆ ವಿವಿಧ ಖಾಸಗಿ ವಿಮಾ ಸಂಸ್ಥೆಗಳಲ್ಲಿರುವ ಹಲವಾರು ಯೋಜನೆಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

**A) ಅರ್ಹತೆಗಳು :-**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ತಹಶಿಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ಸಲ್ಲಿಸಬೇಕು.
3) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
4) ಸರ್ಕಾರಿ/ಸರ್ಕಾರದ ಅನುದಾನಿತ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳು ಹಾಗೂ ಕಾಲೇಜು ಗಳಲ್ಲಿ ವ್ಯಾಸಂಗ ಮಾಡುತ್ತಿರುವುದಕ್ಕೆ ಸದರಿ ಶಾಲಾ ಕಾಲೇಜುಗಳ ಮುಖ್ಯಸ್ಥರುಗಳಿಂದ ದೃಢೀಕರಣ ಪತ್ರ ಸಲ್ಲಿಸಬೇಕು.
5) ಸರ್ಕಾರ ಅಥವಾ ಸರ್ಕಾರೇತರ ಪ್ರಾಯೋಜಿತ ವಿಮೆಯನ್ನು ಪಡೆಯದಿರುವ ಬಗ್ಗೆ ಬಿಳಿ ಹಾಳೆಯಲ್ಲಿ ಪೋಷಕರು ಮುಚ್ಚಳಿಕೆ ಪತ್ರವನ್ನು ನೀಡಬೇಕು.
6) ವಿದ್ಯಾರ್ಥಿಗಳ ವಯಸ್ಸು 6 ವರ್ಷಗಳಿಂದ 21 ವರ್ಷಗಳ ವರೆಗೆ ವಯೋಮಿತಿ ಇರಬೇಕು.
7) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.

8) ಕರ್ನಾಟಕ ರಾಜ್ಯ ಸರ್ಕಾರವು ಸಂಬಂಧಪಟ್ಟ ಇಲಾಖೆಗಳಲ್ಲಿ ವಿವಿಧ ಯೋಜನೆಗಳಿಗೆ ಕುರಿತಂತೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ವಯ ಕುಟುಂಬದ ವಾರ್ಷಿಕ ಆದಾಯದ ಮಿತಿ ಗೊಳಪಟ್ಟಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳ ಪ್ರತಿಗಳನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು ಸಲ್ಲಿಸಬೇಕು.

9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

B) <u>ಆಯ್ಕೆ ವಿಧಾನ:-</u>

x) ವಲಯ ಕಚೇರಿಗಳಿಂದ ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಶಾಲಾ / ಕಾಲೇಜು ಮುಖ್ಯಸ್ಥರುಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಟ್ಟಿಯನ್ನು ಪಡೆಯುವುದು.

xi) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ಗುರಿಯನ್ನು ನಿಗದಿ ಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

XII) ಅರ್ಹ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವಲಯ ಕಚೇರಿಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಸಂಬಂದಪಟ್ಟ ವಲಯ ಕಚೇರಿಗಳಿಗೆ ನಿಗಧಿತ ಸಮಯದೊಳಗೆ ಹಿಂತಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

XIII) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

xiv) ವಲಯವಾರು ಅಪರ / ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕ್ಷೇತ್ರ ಶಿಕ್ಷಣಾಧಿಕಾರಿಗಳು | – | ಸದಸ್ಯರು |
| 4. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 5. ವಿಮಾ ಸಂಸ್ಥೆಯ ಪ್ರತಿನಿಧಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

xv) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xvi) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xvii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xviii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xix) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಪ್ರೀಮಿಯಂ ಹಣವನ್ನು ಪಾವತಿಸದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವಿಮಾ ಸಂಸ್ಥೆಗಳಿಗೆ ನಿಯೋಜಿಸುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## ಶೇ.18ರ ಅನುದಾನದಡಿಯ-<u>ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ (ಮೈಕ್ರೋ ಕ್ರೆಡಿಟ್) -ಕ್ರಿಯಾಯೋಜನೆ</u>

**<u>ಕಾರ್ಯಕ್ರಮದ ಉದ್ದೇಶ:</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಸಣ್ಣ ಪುಟ್ಟ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯ ಧನವನ್ನು ನೀಡಿ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ, ಮುಂದುವರೆಯಲು ಸಹಾಯ ಮಾಡುವುದು ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

**<u>ಕಾರ್ಯಕ್ರಮದ ವಿವರಣೆ:</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಗುರುತಿಸಲಾಗುವ ಪ.ಜಾ/ಪ.ಪಂ.ದ ಫಲಾನುಭವಿಗಳಿಗೆ ಡಾ//ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಸಾಲ ಮಂಜೂರಾದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಗರಿಷ್ಠ ರೂ.10,000/- ಸಹಾಯ ಧನ/ನಿಗಮದಿಂದ ಮಂಜೂರಾಗುವ ಸಾಲದ ಶೇ.50 ರಷ್ಟು ಸಹಾಯ ಧನ ನೀಡಲಾಗುವುದು.

**<u>ಅರ್ಹತೆಗಳು:</u>**

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).
b. ಅಭ್ಯರ್ಥಿಯು 18 ರಿಂದ 40 ವರ್ಷ ವಯೋಮಿತಿಯೊಳಗಿರಬೇಕು.
c. ಕಳೆದ 5 ವರ್ಷದ ಒಳಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಸಿಲ್ದಾರ್ ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**<u>ಆಯ್ಕೆ ವಿದಾನ:</u>**

ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಅರ್ಜಿಗಳನ್ನು ಆಹ್ವಾನಿಸುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯ್ಕೆ ಸಮಿತಿ ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸದಸ್ಯರಾಗಿರುವ ಈ ಕೆಳಕಂಡ ಸಮಿತಿಯ ಮೂಲಕ ಜಂಟಿಯಾಗಿ ಫಲಾನುಭವಿಗಳ ಆಯ್ಕೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| **ವಲಯ ಜಂಟಿ ಆಯುಕ್ತರು** | – | **ಅಧ್ಯಕ್ಷರು** |
| **ವಲಯ ಉಪ ಆಯುಕ್ತರು** | – | **ಉಪಾಧ್ಯಕ್ಷರು** |
| **ಕೇಂದ್ರ ಕಛೇರಿಯ ಒಬ್ಬರು ಪ್ರತಿ ನಿಧಿ** | – | **ಸದಸ್ಯರು** |
| **ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಒಬ್ಬರು ಅಧಿಕಾರಿ** | – | **ಸದಸ್ಯರು** |
| **ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು** | – | **ಸದಸ್ಯ ಕಾರ್ಯದರ್ಶಿ** |

ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆಪಟ್ಟಿ (ಶೇ.10 ರಷ್ಟು)ನ್ನು ಕಾಯ್ದುಕೊಳ್ಳುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಜಂಟಿ ಆಯುಕ್ತರುಗಳ ಕಛೇರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸುವುದು, ಪ್ರತಿ ವಾರ್ಡಿನಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಜನಸಂಖ್ಯೆ ಆಧಾರದ ಮೇರೆಗೆ ಗುರಿಯನ್ನು ನಿಗಧಿಪಡಿಸಿ, ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಸಾಲ ಮಂಜೂರಾತಿ ಮಾಡುವುದರಿಂದ ಜಂಟಿಯಾಗಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

***ವಿಶೇಷ ಆಯುಕ್ತರು (ಆಡಳಿತ)***
***ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ***

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಶೇ.18ರ ಅನುದಾನದಡಿಯ ಕಾರ್ಯಕ್ರಮಗಳು-ಕ್ರಿಯಾಯೋಜನೆ</u>

### <u>ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ (ಪ್ಲಂಬಿಂಗ್)</u>

**<u>೦. ಕಾರ್ಯಕ್ರಮದ ಉದ್ದೇಶ:</u>**

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸ್ವಯಂ ಉದ್ಯೋಗ ಕೈಗೊಂಡು **<u>ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ</u>** ಅಡಿಯಲ್ಲಿ ಸ್ವಾವಲಂಬಿಗಳಾಗಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿ ಬಹಳವಾಗಿ ಗೃಹಗಳು, ಅಪಾರ್ಟ್‌ಮೆಂಟ್ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು ಹಾಗೂ ಇತರೆ ಕಾಮಗಾರಿ ಕೆಲಸಗಳು ನಡೆಯುತ್ತಿವೆ. ಈ ಕೆಲಸ ಕಾರ್ಯಗಳಲ್ಲಿ ಪ್ಲಂಬಿಂಗ್ ಕೆಲಸವು ಅತ್ಯವಶ್ಯಕವಾಗಿದ್ದು ಪ್ಲಂಬರ್‌ಗಳಿಗೆ ಅಪಾರವಾದ ಬೇಡಿಕೆ ಇರುತ್ತದೆ. ಆದ್ದರಿಂದ ಈ ತರಬೇತಿಯಿಂದ ನಿರುದ್ಯೋಗಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**<u>ಃ. ಕಾರ್ಯಕ್ರಮದ ವಿವರಣೆ:</u>**

ಬೆಂಗಳೂರು ನಗರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಲ್ಪಡುವ ಸಂಸ್ಥೆಗಳ ಮುಖಾಂತರ ಪ್ಲಂಬರ್ ತರಬೇತಿಯನ್ನು ಪ.ಜಾ/ಪ.ಪಂ.ದವರಿಗೆ ನೀಡಲಾಗುವುದು.

**<u>ಅ. ಅರ್ಹತೆಗಳು:</u>**

**a)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

**b)** ಅಭ್ಯರ್ಥಿಯು ಅನಕ್ಷರಸ್ಥರು ಅಥವಾ ನಿರುದ್ಯೋಗಿ ಅಕ್ಷರಸ್ಥರಾಗಿರಬೇಕು.

**c)** ಅಭ್ಯರ್ಥಿಯ ವಯಸ್ಸು, 18 ರಿಂದ 40ರೊಳಗೆ ವಯೋಮಿತಿಯಲ್ಲಿರಬೇಕು (ಜನನ ಪ್ರಮಾಣ ಪತ್ರವನ್ನು ಲಗತ್ತಿಸಬೇಕು)

**d)** ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**e)** ತರಬೇತಿ ಮದ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮದ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ರೂ.20.00 ಛಾಪಾ ಕಾಗದಲ್ಲಿ ಮುಚ್ಚಳಿಕೆ ಪತ್ರ ಹಾಗೂ ಈ ಹಿಂದೆ ಸದರಿ ತರಬೇತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. <u>ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.</u>

f) ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

g) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1–00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.

**ಆ. ಆಯ್ಕೆ ವಿಧಾನ:**

a. ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

b. ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

c. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

d. ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

**i. ವಲಯ ಜಂಟಿ ಆಯುಕ್ತರು –ಅಧ್ಯಕ್ಷರು**
**ii. ವಲಯ ಉಪ ಆಯುಕ್ತರು –ಉಪಾಧ್ಯಕ್ಷರು**
**iii. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ – ಸದಸ್ಯರು**
**ಶಿ ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ**

e. ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.

f. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

g. ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

h. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

i. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

j. ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ

ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**ಇ. ತರಬೇತಿಯ ವಿವರಗಳು:**

a. ಅಭ್ಯರ್ಥಿಯು ಶೇ.90 ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.
b. ಅಭ್ಯರ್ಥಿಯು ತರಬೇತಿ ನೀಡುವ ಸಂಸ್ಥೆಯು, ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.
c. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.
d. ಅಭ್ಯರ್ಥಿಯು ಪರೀಕ್ಷೆಯ ಪ್ರವೇಶ ಪತ್ರದ ಜೆ಼ರಾಕ್ಸ್ ಪ್ರತಿಯನ್ನು ಸಂಬಂಧ ಪಟ್ಟ ಪಾಲಿಕೆಯ ವಲಯ ಕಛೇರಿಗೆ ಕಡ್ಡಾಯವಾಗಿ ನೀಡಬೇಕು.

**ಈ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ

### ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಮಗದ ಸಹಯೋಗದೊಂದಿಗೆ ಮನೆಗಳನ್ನು ನಿರ್ಮಿಸಲು ಆರ್ಥಿಕ ಸಹಾಯ ಮಾಡುವುದು – ಮಾರ್ಗಸೂಚಿಗಳು

**೧. ಕಾರ್ಯಕ್ರಮದ ಉದ್ದೇಶ:–**

ಬೆಂಗಳೂರು ನಗರದಲ್ಲಿನ ಕೊಳಚೆ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕಡುಬಡವರಾದ ವಸತಿ ಹೀನರಿಗೆ ಪಾಲಿಕೆ ವತಿಯಿಂದ ಮನೆಗಳನ್ನು ನಿರ್ಮಿಸಿ, ವಸತಿ ಸೌಕರ್ಯಗಳನ್ನು ಒದಗಿಸುವ ಉದ್ದೇಶವಾಗಿರುತ್ತದೆ.

**೨. ಕಾರ್ಯಕ್ರಮದ ವಿವರಣೆ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಯೋಗದೊಂದಿಗೆ ಯೋಜನೆಯನ್ನು ಜಂಟಿಯಾಗಿ ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಯಲ್ಲಿ ಆಯ್ಕೆಯಾದ ಸ್ವಂತ ನಿವೇಶನ ಹೊಂದಿರುವ ಫಲಾನುಭವಿಗಳಿಂದ ರೂ.5,000/–ಗಳ ಪ್ರಾರಂಭಿಕ ಠೇವಣಿಯನ್ನು ಪಡೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರೂ.20,000/–ಗಳ ಸಹಾಯಧನವನ್ನು ಬಿಡುಗಡೆ ಮಾಡಿ, ಒಟ್ಟು ರೂ.25,000/–ಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡಲಾಗುವುದು. ಸದರಿ ಸಂಸ್ಥೆಯವರು ರೂ.15,000/–ಗಳ ಸಾಲವನ್ನು ಮಂಜೂರು ಮಾಡಿ, ಒಟ್ಟು ರೂ.40,000/–ಗಳಿಗೆ ಫಲಾನುಭವಿಯು ಮನೆಯನ್ನು ನಿರ್ಮಿಸಬೇಕಾಗಿರುತ್ತದೆ. ಈ ಮೊತ್ತವನ್ನು ವಸತಿ ನಿಗಮವು ಮನೆಯ ನಿರ್ಮಾಣದ ಪ್ರತಿ ಹಂತಕ್ಕೆ ರೂ.10,000/–ಗಳಂತೆ ಬಿಡುಗಡೆ ಮಾಡಲಾಗುವುದು.

**೩. ಅರ್ಹತೆಗಳು:–**

ಅ) ಫಲಾನುಭವಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅರ್ಜಿದಾರರು ನಿವೇಶನ ಹೊಂದಿ, ಅದರ ಸ್ವಾದೀನ ಪತ್ರ/ಹಕ್ಕು ಪತ್ರ ಹಾಗೂ ಅದಕ್ಕೆ ಸಂಬಂಧಪಟ್ಟ ಮೂಲ ನೊಂದಣಿಯಾದ ದಾಖಲೆಗಳು ಅರ್ಜಿದಾರರ ಹೆಸರಲ್ಲಿರಬೇಕು. ಸಂಬಂಧಿಸಿದ ಕಂದಾಯ ಇಲಾಖೆಯಲ್ಲಿ ಖಾತಾ ನೊಂದಣಿಯಾಗಿ ತೆರಿಗೆ ಪಾವತಿಸಿರಬೇಕು.

ಇ) ಪ್ರತಿ ಫಲಾನುಭವಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳಿಗೆ ಸೇರಿರಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

ಈ) ಫಲಾನುಭವಿಯ ಆದಾಯ ವರ್ಷಕ್ಕೆ ರೂ.1.00 ಲಕ್ಷ ಮೀರಿರಬಾರದು.

ಉ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

**ಆ. ಆಯ್ಕೆ ವಿಧಾನ:-**

ಅ) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಆ) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಇ) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ– ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ – ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ಎ) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ಏ) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ರಾಜೀವ್ ಗ್ರಾಮೀಣ ವಸತಿ ನಿಗಮಕ್ಕೆ ಪ್ರಾರಂಭಿಕ ಠೇವಣಿ ಹಣವನ್ನು ಪಾವತಿಸದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸದರಿ ಸಂಸ್ಥೆಗೆ ನಿಯೋಜಿಸುವುದು.

**ಇ. ಯೋಜನೆಯ ವಿವರಗಳು:-**

ಅ) ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಕಳುಹಿಸಲಾಗುವುದು.

ಆ) ಈ ಮೊದಲು ಫಲಾನುಭವಿಯು ಮೇಲ್ಕಂಡ ನಿಗಮಕ್ಕೆ ಪ್ರಾರಂಭಿಕ ಠೇವಣಿ ರೂ.5,000/- ಗಳನ್ನು ಪಾವತಿ ಮಾಡಿರಬೇಕು.

**3ನೇ ಪುಟಕ್ಕೆ ---**

ಇ) ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಅರ್ಜಿಗಳನ್ನು ಅರ್ಜಿದಾರರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಣೆ ಮಾಡುತ್ತಿರುವ ಸಹ ಕಂದಾಯ ಅಧಿಕಾರಿ ಸ್ಥಳ ಪರಿಶೀಲಿಸಿ, ಫಲಾನುಭವಿಯ ಹೆಸರಿನಲ್ಲಿ ಖಾಲಿ ಜಾಗ ಇದ್ದರೆ ಮಾತ್ರ ಅಂತಹವರಿಗೆ ಮಹಾನಗರ ಪಾಲಿಕೆ ವತಿಯಿಂದ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು.

ಈ) ಅಭ್ಯರ್ಥಿಗಳನ್ನು ಆಯ್ಕೆಮಾಡಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದ ಪ್ರತಿಫಲಾನುಭವಿಯ ಅರ್ಜಿ, ಫಲಾನುಭವಿಯ ಜಾತಿ ಪ್ರಮಾಣ ಪತ್ರ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಶಿಫಾರಸ್ಸಿನೊಂದಿಗೆ ನೀಡಿದಲ್ಲಿ ಮಾತ್ರ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಬಿಡುಗಡೆಯಾದ ಅನುದಾನಕ್ಕೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ರವರಿಂದ ಹಣ ವಿನಿಯೋಗತಾ (ಗಾಟಿಡಚಿಣಾಟಿ ಅಜಾಣಜಿಳಿಚಿಣಜ) ಪ್ರಮಾಣಪತ್ರವನ್ನು ಪಡೆದು, ಕಡತದಲ್ಲಿ ಲಗತ್ತಿಸುವುದು.

ಊ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿರವರು ಕಳುಹಿಸಿಕೊಡುವ ಅರ್ಜಿದಾರರ ಸ್ಥಳ ಪರಿಶೀಲನೆಯನ್ನು ಸಂಬಂಧಪಟ್ಟ ಸಹಕಂದಾಯ ಅಧಿಕಾರಿ ರವರು ಮಾಡಿ ವರದಿ ನೀಡಬೇಕು.

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು</u>

**<u>ಸರ್ಕಾರದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಭೋದನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಮರುಪಾವತಿ ಮತ್ತು ನೋಟ್ ಪುಸ್ತಕಗಳು, ಲೇಖನ ಸಾಮಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳ ಖರೀದಿಯ ಮರುಪಾವತಿ – ಮಾರ್ಗಸೂಚಿಗಳು:–</u>**

**<u>Re-imbursement of Admission Fees, Tuition Fees, Examinations Fees & Expenditure made towards the purchase of Notebooks, Stationeries, Uniforms & Learning Aids for Pre – Metric Students in Govt. Schools.</u>**

B) **<u>ಕಾರ್ಯಕ್ರಮದ ಉದ್ದೇಶ:–</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಕಡು ಬಡವರಾದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಸರ್ಕಾರಿ/ಸರ್ಕಾರದ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವದ ಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ವೆಚ್ಚಗಳನ್ನು ಪಾಲಿಕೆಯಿಂದ ಭರಿಸಿ ಅವರನ್ನು ಶೈಕ್ಷಣಿಕವಾಗಿ ವೃದ್ಧಿಪಡಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

C) **<u>ಕಾರ್ಯಕ್ರಮದ ವಿವರಣೆ:–</u>**

ಸರ್ಕಾರಿ/ಸರ್ಕಾರದ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ ರಾಜ್ಯ/ಕೇಂದ್ರ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿಗೆ ತಗಲುವ ಪ್ರವೇಶ ಶುಲ್ಕ, ಭೋದನ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ ಹಾಗೂ ನೋಟ್ ಪುಸ್ತಕಗಳು, ಲೇಖನ ಸಾಮಾಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳನ್ನು ಖರೀದಿಸಿದ್ದಲ್ಲಿ ಅದನ್ನು ಪಾಲಿಕೆಯಿಂದ ಮರುಪಾವತಿ ಮಾಡಲಾಗುವುದು.

D) **<u>ಅರ್ಹತೆಗಳು:–</u>**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.

**2ನೇ ಪುಟಕ್ಕೆ -----**

3) ಕರ್ನಾಟಕ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ವಿವಿಧ ಯೋಜನೆಗಳಿಗೆ ಕುರಿತಂತೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ವಯ ಕುಟುಂಬದ ವಾರ್ಷಿಕ ಆದಾಯದ ಮಿತಿಗೊಳಪಟ್ಟಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳ ಪ್ರತಿಗಳನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು ಸಲ್ಲಿಸಬೇಕು.
4) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು.
5) ವಿದ್ಯಾರ್ಥಿಗಳ ವಿದ್ಯಾರ್ಹತೆಯು ಒಂದನೇ ತರಗತಿಯಿಂದ ಹತ್ತನೇ ತರಗತಿಯಲ್ಲಿ ಸರ್ಕಾರಿ/ಸರ್ಕಾರದ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.
6) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ಧೃಡೀಕರಣದ ಮುಚ್ಚಳಿಕೆ ಪತ್ರವನ್ನು ಬಿಳಿ ಹಾಳೆಯಲ್ಲಿ ಪೋಷಕರು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಈ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.
7) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು. (ವಲಯ ಕಛೇರಿಯ ವಹಿ, ಆಯ್ಕೆ ಸಮಿತಿಯ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)
8) ಶಾಲಾ ಮುಖ್ಯಸ್ಥರುಗಳಿಂದ ಅನುಮೋದಿತ ಮಕ್ಕಳ ಪಟ್ಟಿಯನ್ನು ಪಡೆಯುವುದು.
9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## E) ಆಯ್ಕೆ ವಿಧಾನ:-

xxix) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಸಂಬಂಧಿತ ಶಾಲೆಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಟ್ಟಿಯನ್ನು ಪಡೆಯುವುದು. ಶಾಲಾ ಮುಖ್ಯಸ್ಥರುಗಳು ಸರ್ಕಾರದಿಂದ ಒದಗಿಸಿರುವ ಸೌಲಭ್ಯಗಳಿಗಿಂತ ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿಗೆ ನೀಡಬೇಕಾಗಿರುವ ಸೌಲಭ್ಯಗಳ ಸವಿವರಗಳನ್ನು ನಮೂದಿಸಿ, ದೃಢೀಕರಿಸಿದ ಪಟ್ಟಿಯನ್ನು ಪಡೆಯುವುದು.

xxx) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xxxi) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

xxxii) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿ.ಇ.ಓ.) | – | ಸದಸ್ಯರು |
| 5. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**3ನೇ ಪುಟಕ್ಕೆ---**

xxxiii) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xxxiv) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xxxv) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

## E) ಸೌಲಭ್ಯಗಳ ವಿವರಗಳು:-

1. ಸರ್ಕಾರದ ವತಿಯಿಂದ ಪಾವತಿಸದೇ ಇರುವಂತಹ ಪ್ರವೇಶ ಶುಲ್ಕ, ಭೋದನ ಶುಲ್ಕ, ಪರೀಕ್ಷಾ ಶುಲ್ಕವನ್ನು ಪ್ರತಿ ವಿದ್ಯಾರ್ಥಿಯು ಹೆಚ್ಚುವರಿಯಾಗಿ ಪಾವತಿಸಿರುವ ಬಗ್ಗೆ ರಸೀದಿಯ ನಕಲುಗಳು ಅಥವಾ ಪಾವತಿ ಮಾಡಬೇಕಾದ ಶುಲ್ಕದ ವಿವರಗಳ ಸೌಲಭ್ಯವನ್ನು ಶಾಲೆಯ ಮುಖ್ಯಸ್ಥರುಗಳು ವಿವರಗಳ ಪಟ್ಟಿಯನ್ನು ವಲಯ ಕಛೇರಿಗಳಿಗೆ ಅದನ್ನು ಸಲ್ಲಿಸದ್ದಲ್ಲಿ ಶಾಲಾ ಶುಲ್ಕವನ್ನು ಪಾವತಿಸುವುದು.
2. ವಿದ್ಯಾರ್ಥಿಗಳ ಕುಟುಂಬದವರೇ ಎಲ್ಲಾ ಲೇಖನ ಸಾಮಾಗ್ರಿಗಳು, ನೋಟ್ ಪುಸ್ತಕಗಳು ಹಾಗೂ ಸಮವಸ್ತ್ರಗಳನ್ನು ಖರೀದಿಸಿದ್ದಲ್ಲಿ ನಿಯಮಾನುಸಾರ ಶಾಲಾ ಮುಖ್ಯಸ್ಥರ ದೃಢೀಕರಣದೊಂದಿಗೆ ವೆಚ್ಚವನ್ನು ಮರು ಪಾವತಿಸುವುದು.
3. ಸರ್ಕಾರದ ವತಿಯಿಂದ ನೀಡದೆ ಇರುವಂತಹ ನೋಟ್ ಪುಸ್ತಕಗಳು, ಲೇಖನ ಸಾಮಾಗ್ರಿಗಳು, ಸಮವಸ್ತ್ರ ಸೌಲಭ್ಯವನ್ನು ಪ್ರತಿ ವಿದ್ಯಾರ್ಥಿಯು ಹೆಚ್ಚುವರಿಯಾಗಿ ಖರೀದಿಸಿರುವ ರಸೀದಿಗಳನ್ನು ಹಾಜರು ಪಡಿಸಿದಲ್ಲಿ ಅದನ್ನು ಪಾಲಿಕೆಯಿಂದ ಮರುಪಾವತಿ ಮಾಡುವುದು.
4. ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ 200 ಪುಟಗಳ ನೋಟ್ ಪುಸ್ತಕಗಳನ್ನು ನೀಡುವುದು. (ಮೆ|| ಎಂ.ಎಸ್.ಐ.ಎಲ್. ಸಂಸ್ಥೆಯ ವಿದ್ಯಾ ಪುಸ್ತಕಗಳ ದರಗಳಲ್ಲಿ)

ಅ) 1 ರಿಂದ 3ನೇ ತರಗತಿಯವರೆಗೆ – ಒಟ್ಟು 03 ನೋಟ್ ಪುಸ್ತಕಗಳು
ಆ) 4 ರಿಂದ 5ನೇ ತರಗತಿಯವರೆಗೆ – ಒಟ್ಟು 05 ನೋಟ್ ಪುಸ್ತಕಗಳು
ಇ) 6 ರಿಂದ 7ನೇ ತರಗತಿಯವರೆಗೆ – ಒಟ್ಟು 07 ನೋಟ್ ಪುಸ್ತಕಗಳು
ಈ) 8 ರಿಂದ 10ನೇ ತರಗತಿಯವರೆಗೆ – ಒಟ್ಟು 15 ನೋಟ್ ಪುಸ್ತಕಗಳು

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ

## ಸಫಾಯಿ ಕರ್ಮಚಾರಿಗಳು, ಕೊಳಚೆ ನಿವಾಸಿಗಳು ಮತ್ತು ಇತರರಿಗೆ ಜೀವ ವಿಮೆ ಯೋಜನೆ – ಮಾರ್ಗಸೂಚಿಗಳು

### A. ಕಾರ್ಯಕ್ರಮದ ಉದ್ದೇಶ:–

ಬೆಂಗಳೂರು ನಗರದಲ್ಲಿ ಕಡು ಬಡವರಾದಂತಹ ಕೊಳಚೆ ನಿವಾಸಿಗಳು, ಸಫಾಯಿ ಕರ್ಮಚಾರಿಗಳು, ಚರ್ಮಕಾರರು, ಕೂಲಿ ಕಾರ್ಮಿಕರುಗಳು, ಸಣ್ಣಪುಟ್ಟ ವ್ಯಾಪಾರಿಗಳು ಹಾಗೂ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರುಗಳು ತಮ್ಮ ದಿನನಿತ್ಯದ ಇತಿಮಿತಿ ಆದಾಯಗಳೊಂದಿಗೆ ಜೀವನ ನಡೆಸಲು ಕಷ್ಟಕರವಾಗಿರುತ್ತದೆ. ಇವರುಗಳು ಅಪಘಾತ ಹೊಂದಿದಲ್ಲಿ/ ಅನಾರೋಗ್ಯ ಪೀಡಿತರಾದಲ್ಲಿ ಹಾಗೂ ಮರಣ ಹೊಂದಿದಲ್ಲಿ ಅವರ ಕುಟುಂಬದ ಸದಸ್ಯರುಗಳಿಗೆ/ ಅವಲಂಬಿತರುಗಳಿಗೆ ತೊಂದರೆಗಳನ್ನು ತಪ್ಪಿಸಲು ಜೀವ ವಿಮೆ ಹೊಂದಿದಲ್ಲಿ ಕುಟುಂಬದವರಿಗೆ ಈ ಆರ್ಥಿಕ ಸಹಾಯವು ನೆರವಾಗುತ್ತದೆ.

### B. ಕಾರ್ಯಕ್ರಮದ ವಿವರಣೆ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಖಾಸಗಿ ಜೀವ ವಿಮಾ ಸಂಸ್ಥೆಗಳೊಂದಿಗೆ ಜಂಟಿಯಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುವುದು. ಜಂಟಿಯಾಗಿ ಪ್ರೀಮಿಯಂ ಹಣವನ್ನು ಜೀವ ವಿಮಾ ಸಂಸ್ಥೆಗಳಿಗೆ ಪಾವತಿಸಲಾಗುವುದು. ಈ ಬಗ್ಗೆ ವಿವಿಧ ಖಾಸಗಿ ಜೀವ ವಿಮಾ ಸಂಸ್ಥೆಗಳಲ್ಲಿರುವ ಹಲವಾರು ಯೋಜನೆಗಳ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

### C. ಅರ್ಹತೆಗಳು:–

ಅ) ಬೃಹತ್ ಬೆಂಗಳೂರು ಮಹಾನಗರ ಪಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

ಆ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

ಇ) ಮಹಿಳೆಯರಿಗೆ ಮತ್ತು ಅಂಗವಿಕಲರಿಗೆ ವಿಶೇಷವಾಗಿ ಆದ್ಯತೆಯನ್ನು ನೀಡಲಾಗುವುದು.

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಉ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

ಋ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.1.00 ಲಕ್ಷದೊಳಗೆ ಇರಬೇಕು.

ಎ) ಅಭ್ಯರ್ಥಿಗಳ ವಯಸ್ಸು 18ರಿಂದ 60ರ ವಯೋಮಿತಿಯಲ್ಲಿ ಇರಬೇಕು.

ಏ) ಈಗಾಗಲೇ ಸರ್ಕಾರ ಅಥವಾ ಸರ್ಕಾರೇತರ ಪ್ರಯೋಜಿತ ವಿಮೆಯ ಪ್ರಯೋಜನೆಯನ್ನು ಪಡೆದಿರಬಾರದು. (ದೃಢೀಕರಣ ಸಲ್ಲಿಸಬೇಕು)

ಐ) ವಿಮೆಯ ಪ್ರೀಮಿಯಂನ್ನು ಸಮಪಾಲು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶೇಕಡಾ 50 ಹಾಗೂ ಫಲಾನುಭವಿ ಶೇಕಡ 50 ರಷ್ಟು ಪಾವತಿಸಬೇಕು) ಕಟ್ಟಲು ಬದ್ದರಾಗಿರಬೇಕು.

ಒ) ಆಯ್ಕೆಯಾದ ಫಲಾನುಭವಿಗಳು ಪ್ರೀಮಿಯಂ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಡಿ.ಡಿ.ಯನ್ನು ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ಸಲ್ಲಿಸಬೇಕು.

## D. ಆಯ್ಕೆ ವಿಧಾನ:-

ಅ) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಆ) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಇ) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ – ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ – ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ
6. ವಿಮಾ ಕಂಪನಿಯ ಪ್ರತಿನಿಧಿ

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ಎ) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ಏ) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಪ್ರೀಮಿಯಂ ಹಣವನ್ನು ಪಾವತಿಸದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವಿಮಾ ಸಂಸ್ಥೆಗಳಿಗೆ ನಿಯೋಜಿಸುವುದು.

**E. ಕಾರ್ಯಕ್ರಮದ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

## ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮದ ಉದ್ದೇಶ :– – ಮಾರ್ಗಸೂಚಿಗಳು:–

## Welfare Programmes to Pourakarmikas, Gangmen, & Malis for their Colony Development.

**A) ಕಾರ್ಯಕ್ರಮದ ಉದ್ದೇಶ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಹಾಗೂ ಗುತ್ತಿಗೆ ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ಮಾಲಿಗಳ ಕಾಲೋನಿಗಳ ಅಭಿವೃದ್ಧಿ ಮತ್ತು ಸಮುದಾಯಕ್ಕಾಗಿ ಅನುಕೂಲಕರವಾಗುವಂತಹ ಮೂಲಭೂತ ಸೌಕರ್ಯಗಳನ್ನು ನೀಡುವ ಯೋಜನೆಗಳನ್ನು ತೆಗೆದುಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**B) ಕಾರ್ಯಕ್ರಮದ ವಿವರಣೆ:–**

ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳಿಗೆ ಪಾಲಿಕೆಯಿಂದ ಉಚಿತವಾಗಿ ನಿವೇಶನಗಳನ್ನು ನೀಡಿ ಹಾಗೂ ಅವರುಗಳಿಗೆ ಮನೆಗಳನ್ನು ನಿರ್ಮಿಸಲಾಗುವುದು. ಖಾಯಂ ಹಾಗೂ ಗುತ್ತಿಗೆ ನೌಕರರುಗಳು ಮನೆಯಿಂದ ಕೆಲಸದ ಸ್ಥಳಗಳಿಗೆ ಹೋಗಿಬರಲು ಬಸ್‌ಪಾಸ್ ಸೌಲಭ್ಯಗಳನ್ನು ಒದಗಿಸುವುದು, ಅವರುಗಳು ವಾಸಿಸುವ ಕಾಲೋನಿಗಳಲ್ಲಿರುವ ಡಾ॥ ಬಿ.ಆರ್. ಅಂಬೇಡ್ಕರ್ ಭವನ ಹಾಗೂ ಸಮುದಾಯ ಭವನಗಳನ್ನು ದುರಸ್ತಿ ಹಾಗೂ ನಿರ್ವಹಣೆ ಮಾಡಲಾಗುವುದು. ಇಲ್ಲಿನ ಕಾಲೋನಿಗಳ ವ್ಯಾಯಾಮ ಶಾಲೆಗಳಲ್ಲಿ ಮಲ್ಟಿ ಜಿಮ್‌ಗಳನ್ನು ಅಳವಡಿಸಿ ಉನ್ನತಿಕರಿಸುವುದು ಹಾಗೂ ಇತರೆ ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳುವುದು.

ಅಲ್ಲದೆ ಪೌರಕಾರ್ಮಿಕರ ಆರ್ಥಿಕ ಅಭಿವೃದ್ದಿ/ಸಮುದಾಯ ಅಭಿವೃದ್ದಿ ಇತರೆ ಅನುಕೂಲಕರ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಖಾಯಂ/ಗುತ್ತಿಗೆ ಪೌರಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳು ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳನ್ನು ಗುರುತಿಸಿ ಕೇಂದ್ರ ಕಛೇರಿಯಿಂದ ಈಗಾಗಲೇ ಹೊರಡಿಸಲಾಗಿರುವ ಸುತ್ತೋಲೆಗಳು, ಆದೇಶಗಳು ಹಾಗೂ ಮಾರ್ಗಸೂಚಿಗಳನ್ವಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಖ್ಯ ಅಭಿಯಂತರರು (ಕಲ್ಯಾಣ) ಅಥವಾ ವಲಯ ಮುಖ್ಯ ಅಭಿಯಂತರರುಗಳ ಕಛೇರಿಗಳಿಂದ ಅನುಷ್ಠಾನ ಮಾಡಲಾಗುವುದು.

C) ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಕಲ್ಯಾಣ ಕಾರ್ಯಕ್ರಮಗಳು

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯ ಧನ ಕಾರ್ಯಕ್ರಮ – ಪರಿಷ್ಕೃತ ಮಾರ್ಗಸೂಚಿ

**(Aid for Competitive Exams)**

### A. ಕಾರ್ಯಕ್ರಮದ ಉದ್ದೇಶ:

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆ ತರುವ ಪ್ರಮುಖ ಉದ್ದೇಶವನ್ನು ಕಾರ್ಯಕ್ರಮ ಒಳಗೊಂಡಿರುತ್ತದೆ. ಹಾಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಅವರಿಗೆ ರಾಜ್ಯದ ಮತ್ತು ದೇಶದ ಅತ್ಯುನ್ನತ ಹುದ್ದೆಗಳು ಸಿಗುವಂತಾಗಲು ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕ ಸೇವಾ ಆಯೋಗರವರು ಹಾಗೂ ಇತರೆ ಪ್ರಾಧಿಕಾರದವರು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಾದ ನಾಗರೀಕ ಸೇವಾ ಪರೀಕ್ಷೆಗಳು IAS, KAS, KES, CAT, IIT-JEE, CET, KPSC Exams, RRB Exams, GRE/GMAT ಗಳಲ್ಲಿ ತರಬೇತಿ ನೀಡಿ ಸದರಿ ವರ್ಗದ ಅಭ್ಯರ್ಥಿಗಳಿಗೆ ಅತ್ಯುನ್ನತ ಹುದ್ದೆಗಳು ಸಿಗುವಂತೆ ಮಾಡುವುದೇ ಕಾರ್ಯಮದ ಉದ್ದೇಶವಾಗಿರುತ್ತದೆ.

### B. ಕಾರ್ಯಕ್ರಮದ ವಿವರಣೆ:

ಸದರಿ ಕಾರ್ಯಕ್ರಮದಲ್ಲಿ ಸ್ಪರ್ದಾತ್ಮಕ ಪರೀಕ್ಷೆಗಳಾದ ಕೇಂದ್ರ/ರಾಜ್ಯ ಲೋಕ ಸೇವಾ ಆಯೋಗ ನಡೆಸುವ (ಐ.ಎ.ಎಸ್) ಸಿವಿಲ್ ಸರ್ವಿಸಸ್ ಪರೀಕ್ಷೆಗಳು/ನಾಗರೀಕ ಸೇವಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ ನಡೆಸಲು ಪತ್ರಾಂಕಿತ ಅಧಿಕಾರಿಗಳ ಪರೀಕ್ಷೆ ಗುಂಪು 'ಎ' ಮತ್ತು 'ಬಿ' ಕೆ.ಎ.ಎಸ್, ಎಫ್.ಡಿ.ಎ, ಎಸ್.ಡಿ.ಎ, ಕೆ.ಇ.ಎಸ್, ವಿವಿದ ಬ್ಯಾಂಕ್‌ಗಳಿಗಾಗಿ ಪ್ರೊಬೇಷನರಿ ಆಫೀಸರ್‌ಗಳ ಪರೀಕ್ಷೆ, ಕ್ಲೆರಿಕಲ್ ಪರೀಕ್ಷೆ ಭಾರತೀಯ ಆಡಳಿತ ಸಂಸ್ಥೆ (ಐ.ಐ.ಎಂ) ಸಂಸ್ಥೆಯಿಂದ ನಡೆಸುವ ಸಿ.ಎ.ಟಿ(ಕಾಮನ್ ಅಡ್ಮೀಷನ್ ಟೆಸ್ಟ್), ಮತ್ತಿತರ ಪರೀಕ್ಷೆಗಾಗಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಶೇಷ ತರಬೇತಿ ನೀಡುವ ಸಂಸ್ಥೆಗಳಿಗೆ ನಿಯೋಜಿಸಿ, ತರಬೇತಿ ನೀಡಿ, ಸ್ಪರ್ದಾತ್ಮಕ ಪರೀಕ್ಷೆಗಳಲ್ಲಿ ಸದರಿ ಸಮುದಾಯದ ಅಭ್ಯರ್ಥಿಗಳು ಆಯ್ಕೆ ಆಗಲು ಅವಕಾಶವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿದೆ.

ಪಾಲಿಕೆ ವತಿಯಿಂದ ನೀಡುವ ಉಚಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಇಚ್ಚಿಸುವ ಎಲ್ಲಾ ಅಭ್ಯರ್ಥಿಗಳಿಗೂ ಅನುಕೂಲವಾಗುವಂತಹ ಈ ಕೆಳಕಂಡಂತೆ ತರಬೇತಿ ನೀಡಲಾಗುವುದು.

**2ನೇ ಪುಟಕ್ಕೆ----**

– 2 –

1) ಮೊದಲನೆ ತಂಡ ಜನವರಿ ಇಂದ ಮಾರ್ಚ್‌ವರೆಗೆ
2) ಎರಡನೆ ತಂಡ ಫೆಬ್ರವರಿ ಇಂದ ಏಪ್ರಿಲ್‌ವರೆಗೆ

ಈ ಮೇಲಿನ ವೇಳಾ ಪಟ್ಟಿಯಂತೆ ತರಬೇತಿ ಪಡೆದು, ತರಬೇತಿ ಮಾರ್ಗದರ್ಶನದಂತೆ ದೀರ್ಘಕಾಲ ಅಭ್ಯಾಸ ಮಾಡುವುದರಿಂದ ಉತ್ತಮ ಫಲಿತಾಂಶ ಪಡೆಯುವುದರ ಜೊತೆಗೆ ಅರ್ಥಪೂರ್ಣ ತರಬೇತಿ ನೀಡಿದಂತಾಗುತ್ತದೆ.

ಕೆ.ಪಿ.ಎಸ್.ಸಿ ಮತ್ತು ಯು.ಪಿ.ಎಸ್.ಸಿ. ಇತರೆ ಸರ್ಕಾರದ ಸಂಸ್ಥೆಗಳು ಹಾಗೂ ಇತರೆ ಪ್ರಾಧಿಕಾರಗಳಿಂದ ನಡೆಸುವ ಪರೀಕ್ಷೆಗಳಿಗೆ ಅರ್ಜಿಸಲ್ಲಿಸಿದ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಇದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ.

**C. ಅರ್ಹತೆಗಳು:**

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು ಅಥವಾ ಹಾಲಿ ಚುನಾಯಿತ ಜನಪ್ರತಿನಿಧಿಗಳ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರವನ್ನು ಸಲ್ಲಿಸಬಹುದಾಗಿದೆ.

b. ಆಯಾ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತರಬೇತಿಗೆ ಅರ್ಹರಾಗಿರುತ್ತಾರೆ, ಅರ್ಜಿ ಸಲ್ಲಿಸಿರುವುದರ ಬಗ್ಗೆ, ಅರ್ಜಿಯ ನಕಲು ಪ್ರತಿ, ಸ್ವೀಕೃತಿ ಪತ್ರ ಹಾಗೂ ಗೆಜೆಟೆಡ್ ಅಧಿಕಾರಿಯಿಂದ ದೃಡಿಕರಿಸಿದ ದಾಖಲೆಗಳನ್ನು ಅರ್ಜಿದಾರರು ನಗರ ಪಾಲಿಕೆಯ ಸಂಬಂಧಪಟ್ಟ ವಲಯ ಕಛೇರಿಗೆ ಅರ್ಜಿಯೊಂದಿಗೆ ಒದಗಿಸಬೇಕು.

c. ಅಭ್ಯರ್ಥಿಯ ವಯಸ್ಸು, (ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಲಗತ್ತಿಸಿರಬೇಕು) ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಪ್ರಾಧಿಕಾರವು ನಿಗಧಿಪಡಿಸಿರುವ ವಯೋಮಿತಿಯೊಳಗಿರಬೇಕು.

d. ಪರಿಶಿಷ್ಠ ಜಾತಿ ಮತ್ತು ಪಂಗಡದ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

e. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿರುವುದಕ್ಕೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**3ನೇ ಪುಟಕ್ಕೆ ---**

f. ತರಬೇತಿ ಮದ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮದ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಮುಚ್ಚಳಿಕೆ ಪತ್ರ /ಸ್ವಯಂ ದೃಢೀಕರಣ ಪತ್ರ ಸಲ್ಲಿಸಬೇಕು. ಈ ಹಿಂದೆ ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.

g. ಅರ್ಜಿದಾರರು 2 ಬಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು. (ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

h. ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಇಲಾಖೆ ಅಥವ ಇತರೆ ಸರ್ಕಾರಿ ನಿಗಮ/ಮಂಡಳಿಗಳಿಂದ ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

i. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**D. ವಾರ್ಷಿಕ ಆದಾಯದ ಮಿತಿ:**

**a)** ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ವಾರ್ಷಿಕ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.

**b)** ಹಿಂದುಳಿದ ವರ್ಗದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ ಸೇರಿದ ಅಭ್ಯರ್ಥಿಗಳಿಗೆ ಕ್ರಮವಾಗಿ ರೂ.22,000/- (ಇಪ್ಪತ್ತೆರಡು ಸಾವಿರ ರೂಪಾಯಿಗಳು) ಹಾಗೂ ರೂ.2.00 ಲಕ್ಷಗಳ (ರೂ. ಎರಡು ಲಕ್ಷಗಳು) ವಾರ್ಷಿಕ ಆದಾಯ ಮಿತಿಯೊಳಗಿರಬೇಕು.

**E. ಆಯ್ಕೆ ವಿಧಾನ:**

a. ಅರ್ಜಿಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ತರಬೇತಿ ಸಂಸ್ಥೆಯು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ / ವಲಯ ಕಛೇರಿಯ ಅಧಿಕಾರಿಗಳ ಸಹಕಾರದೊಂದಿಗೆ (ಸಂಯೋಜನೆಯೊಂದಿಗೆ) ನಡೆಸಿ, ಮೆರಿಟ್ ಬೆಸ್ಟ್ ರ್‍ಯಾಂಕ್ ಲಿಸ್ಟ್‌ನ್ನು ಜಂಟಿಯಾಗಿ ಸಿದ್ದಪಡಿಸಿ, ಕೇಂದ್ರ ಮತ್ತು ವಲಯ ಕಛೇರಿಯ ಅಧಿಕಾರಿಗಳಿಗೆ ನೀಡುವುದು.

b. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪ್ರಕಟಣೆ ನೀಡಲಾಗುವುದು.

c. ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**4ನೇ ಪುಟಕ್ಕೆ ----**

**- 4 -**

d. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

e. ಈ ಕೆಳಕಂಡ ಹಿರಿಯ ಅಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಖಾಂತರ ಅರ್ಹ ಅಬ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

| | | | |
|---|---|---|---|
| **i.** | **ವಲಯ ಅಪರ/ಜಂಟಿ ಆಯುಕ್ತರು** | – | **ಅಧ್ಯಕ್ಷರು** |
| **ii.** | **ವಲಯ ಉಪ ಆಯುಕ್ತರು** | – | **ಉಪಾಧ್ಯಕ್ಷರು** |
| **iii.** | **ಜಿಲ್ಲಾ ಮಟ್ಟದ ಸಮಾಜ ಕಲ್ಯಾಣಾಧಿಕಾರಿ/ಹಿಂದುಳಿದ/ ಅಲ್ಪ ಸಂಖ್ಯಾತ/ಮಹಿಳಾ ಮತ್ತು ಮಕ್ಕಳ ಇಲಾಖೆಯ ಓರ್ವ ಪ್ರತಿನಿಧಿ** | – | **ಸದಸ್ಯರು** |
| **iv.** | **ಕೇಂದ್ರ ಕಛೇರಿಯ ಒಬ್ಬರು ಪ್ರತಿನಿಧಿ** | – | **ಸದಸ್ಯರು** |
| **v.** | **ವಲಯ ಸಹಾಯಕ ಕಲ್ಯಾಣಾಧಿಕಾರಿ** | – | **ಸದಸ್ಯ ಕಾರ್ಯದರ್ಶಿ** |

f. ನಿಗದಿತ ದಿನದೊಳಗಾಗಿ ಅರ್ಜಿ ಸಲ್ಲಿಸಿದವರ ಒಂದು ಮೆರಿಟ್ ಲಿಸ್ಟ್‌ನ್ನು ಆಯಾ ಪರೀಕ್ಷೆಗಳ ಕ್ವಾಲಿಫೈಯಿಂಗ್ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ಆಧರಿಸಿ ತಯಾರಿಸುವುದು.

g. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸುವಾಗ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.

h. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

i. ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

j. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

k. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

l. ಈ ಆಕ್ಷೇಪಣೆ ಮುಕ್ತ ಪಟ್ಟಿಯನ್ನು ಕೇಂದ್ರ ಕಛೇರಿಗೆ ಸಮೂಚಿತ ಮಾರ್ಗದಲ್ಲಿ ಅಪರ ಆಯುಕ್ತರು (ಆಡಳಿತ) ರವರಿಗೆ ಸಲ್ಲಿಸಿ ಅನುಮೋದನೆ ಪಡೆಯುವುದು.

m. ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**5ನೇ ಪುಟಕ್ಕೆ------**

**F. ತರಬೇತಿಯ ವಿವರಗಳು:**

a. ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.
b. ಅಭ್ಯರ್ಥಿಯು ತರಬೇತಿ ನೀಡುವ ಸಂಸ್ಥೆಯು, ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.
c. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.
d. ಅಭ್ಯರ್ಥಿಯು ಪರೀಕ್ಷೆಯ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿಯನ್ನು ಸಂಬಂಧ ಪಟ್ಟ ಪಾಲಿಕೆಯ ವಲಯ ಕಛೇರಿಗೆ ಕಡ್ಡಾಯವಾಗಿ ನೀಡಬೇಕು.

**H. ತರಬೇತಿ ನೀಡುವ ಸಂಸ್ಥೆಗಳ ಆಯ್ಕೆ ವಿಧಾನ ಮತ್ತು ಅರ್ಹತೆಗಳು:**

1. ತರಬೇತಿ ನೀಡುವ ಬಗ್ಗೆ ತರಬೇತಿ ಸಂಸ್ಥೆಯು ಕರ್ನಾಟಕ/ಭಾರತ ಸರ್ಕಾರದಿಂದ ನೊಂದಾಯಿತ ಸಂಸ್ಥೆಯಾಗಿರಬೇಕು. ಪ್ರಸಕ್ತ ಸಾಲಿಗೆ ನವೀಕರಿಸಿರಬೇಕು.
2. ತರಬೇತಿ ನೀಡುವ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ನೊಂದಾಯಿಸಿಕೊಂಡಿರಬೇಕು.
3. ತರಬೇತಿ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತರಬೇತಿ ಕೇಂದ್ರವನ್ನು ಹೊಂದಿರಬೇಕು.
4. ತರಬೇತಿಗೆ ಪ್ರಾಯೋಜಿಸಲಾಗುವ ಅಭ್ಯರ್ಥಿಗಳ ಹಾಜರಾತಿಗೆ ತರಬೇತಿ ಸಂಸ್ಥೆಯವರು ಬಯೋ– ಮೆಟ್ರಿಕ್ ಪದ್ದತಿಯನ್ನು ಅಳವಡಿಸಿರಬೇಕು.
5. ತರಬೇತಿ ನೀಡಲು ಅವಶ್ಯಕ ಮೂಲಭೂತ ಸೌಕರ್ಯ ಹೊಂದಿರಬೇಕು. ಸುಸಜ್ಜಿತ ಕೊಠಡಿಗಳು, ತರಬೇತಿಗೆ ಬೇಕಾದ ಭೋಧನ ಸಾಮಗ್ರಿಗಳು, ಗ್ರಂಥಾಲಯ, ವಿಷಯವಾರು ಪರಿಣಿತಿ ಹೊಂದಿದ ಪ್ರಖ್ಯಾತ ಭೋದಕರುಗಳ ವಿವರಗಳನ್ನು ನೀಡಬೇಕು.
6. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಸ್ಥೆಯಿಂದ ತರಬೇತಿ ನೀಡಿ, ಪಡೆದಿರುವ ಫಲಿತಾಂಶದ ಬಗ್ಗೆ ಕಳೆದ 5 ವರ್ಷಗಳ ಪೂರ್ಣವಿವರಗಳನ್ನು ನೀಡಬೇಕು.
7. ಕಳೆದ 3 ವರ್ಷಗಳ ಆಡಿಟ್ ಮಾಡಿದ ಆಡಿಟ್ ವರದಿಗಳನ್ನು ನೀಡಬೇಕು.
8. ಮೇಲ್ಕಂಡ ಅಂಶಗಳೊಂದಿಗೆ ಕೆ.ಟಿ.ಪಿ.ಪಿ. ಕಾಯ್ದೆಯ ಸೇವಾ ನಿಯಮಗಳ ಎಲ್ಲಾ ಷರತ್ತುಗಳನ್ನು ವಿಧಿಸತಕ್ಕದ್ದು.

**ವಿಶೇಷ /ಅಪರ ಆಯುಕ್ತರು**
**(ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

### ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿ ವಿಕಾಸ ಕಾರ್ಯಾಗಾರ ನಡೆಸಲು – ಮಾರ್ಗಸೂಚಿಗಳು:–

### Carrier Guidance Workshop & Workshop of Personality Development to Students.

**F) ಕಾರ್ಯಕ್ರಮದ ಉದ್ದೇಶ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಾಗೂ ವ್ಯಾಪ್ತಿಯಲ್ಲಿನ ಶಾಲಾ/ಕಾಲೇಜುಗಳಲ್ಲಿ ಮತ್ತು ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ನಂತರ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಳ್ಳಲು ಈ ಬಗ್ಗೆ ಸರ್ಕಾರೇತರ ಸಂಸ್ಥೆಗಳಿಂದ ವೃತ್ತಿ ಮಾರ್ಗದರ್ಶನ ನಡೆಸುವುದು.

ವಿದ್ಯಾರ್ಥಿಗಳಲ್ಲಿ ಇರಬೇಕಾದ ಜೀವನದ ಮೌಲ್ಯಗಳು, ಆದರ್ಶಗಳು, ಒಳ್ಳೆಯ ವ್ಯಕ್ತಿತ್ವಗಳು, ಜೀವನ ನಿರ್ವಹಣೆಯನ್ನು ಎದುರಿಸಲು ಸವಾಲುಗಳು, ಉನ್ನತ ಹುದ್ದೆಗಳಿಗೆ ಸಂದರ್ಶನಕ್ಕೆ ತಯಾರಾಗಲು ಇದರಿಂದ ಪ್ರೌಢಿಮೆಯನ್ನು ಬೆಳೆಸಿಕೊಳ್ಳಲು ಸರ್ಕಾರೇತರ ಸಂಸ್ಥೆಗಳಿಂದ ಈ ಕುರಿತು ವ್ಯಕ್ತಿ ವಿಕಾಸ ಕಾರ್ಯಗಳನ್ನು ನಡೆಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ವಿಕಾಸ ಹೊಂದಿ ಅವರುಗಳು ಮುಂದೆ ಉತ್ತಮ ಪ್ರಜೆಗಳಾಗುತ್ತಾರೆ.

**G) ಕಾರ್ಯಕ್ರಮದ ವಿವರಣೆ:–**

ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಾಗೂ ಇದರ ವ್ಯಾಪ್ತಿಯಲ್ಲಿನ ಶಾಲಾ ಕಾಲೇಜುಗಳಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಮೇಲೆ ತಿಳಿಸಿರುವ ಉದ್ದೇಶಗಳನ್ನೊಳಗೊಂಡು ಟೆಂಡರ್ ಕರೆದು ಸರ್ಕಾರೇತರ ಸಂಸ್ಥೆಗಳಿಂದ ವೃತ್ತಿ ಮಾರ್ಗದರ್ಶನ ಹಾಗೂ ವ್ಯಕ್ತಿ ವಿಕಾಸ ಕಾರ್ಯಗಾರಗಳನ್ನು ನಡೆಸಲಾಗುವುದು.

**H) ಅರ್ಹತೆಗಳು:–**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.

2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

3) ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.

4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.

5) ವಿದ್ಯಾರ್ಥಿಗಳು ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವುದಕ್ಕೆ ಶಾಲಾ ಮುಖ್ಯಸ್ಥರುಗಳು ಅಥವಾ ಪ್ರಾಂಶುಪಾಲರುಗಳಿಂದ ವ್ಯಾಸಂಗ ಮಾಡುತ್ತಿರುವುದಕ್ಕೆ ದೃಢೀಕರಣ ಸಲ್ಲಿಸಬೇಕು.

6) ಅರ್ಜಿದಾರರ 2 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.

7) ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳ ಅನುಮೋದಿತ ಮಕ್ಕಳ ಪಟ್ಟಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು.

8) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## I) <u>ಆಯ್ಕೆ ವಿಧಾನ:–</u>

xxxvi) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

xxxvii) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

xxxviii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xxxix) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇ.3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

xl) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

## J) ಸರ್ಕಾರೇತರ ಸಂಸ್ಥೆಗಳಲ್ಲಿ ಇರಬೇಕಾದ ಅರ್ಹತೆಗಳು:–

1) ವೃತ್ತಿ ಮಾರ್ಗದರ್ಶನ ನೀಡುವ ಹಾಗೂ ವ್ಯಕ್ತಿ ವಿಕಾಸ ಕಾರ್ಯಗಾರಗಳನ್ನು ನಡೆಸುವ ಸಂಸ್ಥೆಗಳಲ್ಲಿ ಹೆಸರಾಂತ ಹಾಗೂ ಪ್ರಖ್ಯಾತ ಉಪನ್ಯಾಸಕರುಗಳು ಹಾಗೂ

ಮಾರ್ಗದರ್ಶಕರುಗಳ ಸಿಬ್ಬಂಧಿಗಳನ್ನು ಹೊಂದಿರಬೇಕು. (ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸಬೇಕು)

2) ಈ ಹಿಂದೆ ಮೇಲ್ಕಂಡ ರೀತಿಯ ಕಾರ್ಯಕ್ರಮಗಳನ್ನು ನಡೆಸಿರುವ ಅನುಭವ ಇರಬೇಕು. (ದಾಖಲಾತಿಗಳನ್ನು ಸಲ್ಲಿಸಬೇಕು)
3) ಸರ್ಕಾರದ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಈ ರೀತಿಯ ಕಾರ್ಯಾದೇಶವನ್ನು ಪಡೆದು ಯಶಸ್ವಿಯಾಗಿ ಕಾರ್ಯಕ್ರಮವನ್ನು ಪೂರ್ಣಗೊಳಿಸಿರುವುದಕ್ಕೆ ದಾಖಲೆಗಳನ್ನು ಒದಗಿಸಬೇಕು.
4) ಈ ರೀತಿಯ ಶೈಕ್ಷಣಿಕ ಕಾರ್ಯಕ್ರಮವನ್ನು ನಡೆಸಿ, ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನಗಳನ್ನು ನೀಡಲು ಸೇವಾ ಮನೋಭಾವ ಹೊಂದಿರಬೇಕು.
5) ಸರ್ಕಾರೇತರ ಸಂಸ್ಥೆಗಳು ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಪ್ರತಿ ಆರ್ಥಿಕ ವರ್ಷಕ್ಕೆ ರೂ.10.00 ಲಕ್ಷಗಳ ವಹಿವಾಟು ನಡೆಸಿರಬೇಕು.

## K) ಸಂಸ್ಥೆಗಳ ಆಯ್ಕೆಯ ವಿವರಗಳು:–

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಡಿಯಲ್ಲಿ ಟೆಂಡರ್ ಕರೆದು ವೃತ್ತಿ ಮಾರ್ಗದರ್ಶನ ಹಾಗೂ ಕಾರ್ಯಗಾರಗಳನ್ನು ನಡೆಸುವುದು.
2) ಟೆಂಡರ್ ಆಹ್ವಾನಿಸಲು ಟೆಂಡರ್ ಪರಿಶೀಲಿಸಲು ಹಾಗೂ ಟೆಂಡರ್‌ನ್ನು ಅಂಗೀಕರಿಸುವ ಈ ಕೆಳಕಂಡ ಸಮಿತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ವಲಯದ ಸಹಾಯಕ ನಿಯಂತ್ರಕರು (ಹಣಕಾಸು) | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಶೀ.18ರ ಅನುದಾನದಡಿಯ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು-ಕ್ರಿಯಾಯೋಜನೆ</u>

### <u>ಗಣಕಯಂತ್ರ ಹಾರ್ಡ್‌ವೇರ್ ತರಬೇತಿ.</u>

#### <u>೦. ಕಾರ್ಯಕ್ರಮದ ಉದ್ದೇಶ.</u>

ಬೆಂಗಳೂರು ನಗರವು ಸಿಲಿಕಾನ್ ಸಿಟಿ ಹಾಗೂ ಐ.ಟಿ. ಸಿಟಿ ಎಂಬುದಾಗಿ ಪ್ರಖ್ಯಾತಿ ಹೊಂದಿದ್ದು, ಗಣಕಯಂತ್ರಗಳನ್ನು ಸರ್ಕಾರ, ಸರ್ಕಾರೇತರ, ಖಾಸಗಿ ಸಂಸ್ಥೆಗಳು, ಸ್ವಯಂ ಉದ್ಯೋಗದಲ್ಲಿ, ವೈಯಕ್ತಿಕವಾಗಿ ಹಾಗೂ ಇತ್ಯಾದಿಗಳಲ್ಲಿ ಬಳಸಲಾಗುತ್ತಿದೆ. ಗಣಕಯಂತ್ರ ಜೋಡಣೆ (ೂಜಱಱಟಥಿ), ದುರಸ್ತಿ ಮತ್ತು ಓಜಾ ತಿಡಿಖಇಱಟಿಂ ವಿಷಯದಲ್ಲಿ ಗಣಕಯಂತ್ರ ಹಾರ್ಡ್‌ವೇರ್ ತರಬೇತಿಯನ್ನು ಹೊಂದಿದಲ್ಲಿ ಸ್ವಯಂಉದ್ಯೋಗ ಗಣಕಯಂತ್ರ ಆಧಾರಿತ ಕೆಲಸ ಕಾರ್ಯಗಳು ಹಾಗೂ ಇತರೆ ಹುದ್ದೆಗಳಲ್ಲಿ ಉದ್ಯೋಗವಕಾಶವು ಹೆಚ್ಚಾಗಿರುತ್ತದೆ. ಆದ್ದರಿಂದ ಪ.ಜಾ/ಪ.ಪಂ ದ ಹಾಗೂ ಹಿಂ.ಅ.ಸಂ. ವರ್ಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಗಣಕಯಂತ್ರ ಹಾರ್ಡ್‌ವೇರ್ ವಿಷಯದಲ್ಲಿ ತರಬೇತಿ ಹೊಂದಿದ ನಂತರ ಮೇಲ್ಕಂಡ ಹುದ್ದೆಗಳಲ್ಲಿ ತೊಡಗಿಸಿಕೊಂಡು ಅಥವಾ ಸ್ವಯಂ ಉದ್ಯೋಗ ಹೊಂದಲು ಅವಕಾಶ ಇರುತ್ತದೆ. ಇದರಿಂದ ನಿರುದ್ಯೋಗಿಗಳು ಸ್ವಾವಲಂಬಿಗಳಾಗುತ್ತಾರೆ.

#### <u>ಃ. ಕಾರ್ಯಕ್ರಮದ ವಿವರಣೆ.</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಟ್ಟು 8 ವಲಯಗಳಲ್ಲಿ ಗಣಕಯಂತ್ರ ಹಾರ್ಡ್‌ವೇರ್ ತರಬೇತಿಯನ್ನು ಟೆಂಡರ್ ಮುಖಾಂತರ ಖಾಸಗಿ ಸಂಸ್ಥೆಗಳನ್ನು ಆಹ್ವಾನಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ.

#### <u>ಅ. ಅರ್ಹತೆಗಳು.</u>

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

2. ಅಭ್ಯರ್ಥಿಯ ವಯಸ್ಸು ಪ.ಜಾ/ಪ.ಪಂ ದವರಿಗೆ 18 ರಿಂದ 40 ಹಾಗೂ ಹಿಂ.ಅ.ಸಂ. ದವರಿಗೆ 18 ರಿಂದ 35ರೊಳಗೆ ವಯೋಮಿತಿ ಇರಬೇಕು(ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಲಗತ್ತಿಸಿರಬೇಕು)

3. ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

4. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

5. ತರಬೇತಿ ಮಧ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮಧ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ರೂ.20.00 ಛಾಪಾಕಾಗದಲ್ಲಿ ಮುಚ್ಚಳಿಕೆ ಪತ್ರ ಹಾಗೂ ಈ ಹಿಂದೆ ಸದರಿ ಸ್ಪರ್ದಾತ್ಮಕ ಪರೀಕ್ಷೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. <u>ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.</u>

6. ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ.

**<u>ಆ. ವಾರ್ಷಿಕ ಆದಾಯದ ಮಿತಿ:</u>**

**a)** ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ವಾರ್ಷಿಕ ರೂ.1-00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.

**b)** ಆದಾಯ ಪ್ರವರ್ಗ-1ನ್ನು ಹೊರತು ಪಡಿಸಿ ಇತರೆ ಹಿಂದುಳಿದ ವರ್ಗದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ.22,000/- (ಇಪ್ಪತ್ತೆರಡು ಸಾವಿರ ರೂಪಾಯಿಗಳು) ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿ ಪಡಿಸಲಾಗಿದೆ.

**c)** ಅಲ್ಪ ಸಂಖ್ಯಾತರಿಗೆ ವಾರ್ಷಿಕ ಆದಾಯ ರೂ. 2-00ಲಕ್ಷ (ಎರಡು ಲಕ್ಷ ರೂಪಾಯಿಗಳು) ಒಳಗಿರಬೇಕು.

**<u>ಇ. ಆಯ್ಕೆ ವಿಧಾನ:</u>**

**a)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ಕಛೇರಿಗಳಿಂದ ಗಣಕಯಂತ್ರ ಹಾರ್ಡ್‌ವೇರ್ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡಲಾಗುವುದು.

**b)** ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**c)** ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

**d)** ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

i. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
i. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
ii. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ – ಸದಸ್ಯರು
iii. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು –ಸದಸ್ಯ ಕಾರ್ಯದರ್ಶಿ

e) ನಿಗದಿತ ದಿನದೊಳಗಾಗಿ ಅರ್ಜಿ ಸಲ್ಲಿಸಿದವರ ಒಂದು ಮೆರಿಟ್ ಲಿಸ್ಟ್‌ನ್ನು ಆಯಾ ಪರೀಕ್ಷೆಗಳ ಕ್ವಾಲಿಫೈಯಿಂಗ್ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ಆಧರಿಸಿ ತಯಾರಿಸುವುದು.
f) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸುವಾಗ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.
g) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.
h) ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.
i) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.
j) ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.
k) ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**ಈ. ತರಬೇತಿಯ ವಿವರಗಳು:**

ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು. ತರಬೇತಿ ನೀಡುವ ಸಂಸ್ಥೆಯು ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕು. ತರಬೇತಿಯ ನಂತರ ಅಂತಿಮ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

**ಊ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

**ಸಹಿ/–**
**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

**ಜಿ.ಟಿ.ಟಿ.ಸಿ., ಎನ್.ಟಿ.ಟಿ.ಎಫ್., ಎನ್.ಐ.ಎಫ್.ಟಿ., ಎಸ್.ಎಮ್.ಇ. ಹಾಗೂ ಇತರೇ ರಾಜ್ಯ / ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳ ತರಬೇತಿಗೆ ಅಭ್ಯರ್ಥಿಗಳ ಪ್ರಾಯೋಜನೆ - ಮಾರ್ಗಸೂಚಿಗಳು:-**

**Deputation of students to state, central & their undertakings Professional Training Institutes (GTTC,NTTF, NIFT, SME (GOI) etc)**

A) **ಕಾರ್ಯಕ್ರಮದ ಉದ್ದೇಶ:-**

ಬೃಹತ್ ಬೆಂಗಳೂರು ಮಹಾ ನಗರ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು Government Toolroom & Training Centre, Nettur Technical Training Foundation, National Institute of Fashion Technology, Small & Micro Enterprises ಹಾಗೂ ಇತರೇ ರಾಜ್ಯ / ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳು ನಡೆಸುತ್ತಿರುವ ವೃತ್ತಿ ನಿರತ ತರಬೇತಿಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಪಾಲಿಕೆಯಿಂದ ಅದರ ತರಬೇತಿ ವೆಚ್ಚವನ್ನು ಭರಿಸಲಾಗುವುದು. ಈ ಮೇಲಿನ ಸಂಸ್ಥೆಗಳಲ್ಲಿ ತರಬೇತಿ ಹೊಂದಿ ಸ್ವಾವಲಂಬಿಗಳಾಗಿ, ಆರ್ಥಿಕವಾಗಿ ಮುಂದುವರೆಯುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

B) **ಕಾರ್ಯಕ್ರಮದ ವಿವರಣೆ:-**

G.T.T.C., N.T.T.F., N.I.F.T. S.M.E. ಹಾಗೂ ಇತರೇ ರಾಜ್ಯ / ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳು ನಡೆಸುವಂತಹ ತರಬೇತಿಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಆಯ್ಕೆಯಾಗಿದ್ದಲ್ಲಿ ತರಬೇತಿಗೆ ವೆಚ್ಚವಾಗುವ ಪ್ರವೇಶ ಶುಲ್ಕ, ವಾರ್ಷಿಕ ಭೋದನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಪಾಲಿಕೆ ವತಿಯಿಂದ ಭರಿಸಲಾಗುವುದು.

C) **ಅರ್ಹತೆಗಳು:-**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.

**2ನೇ ಪುಟಕ್ಕೆ----**

2) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
3) ಕೊಳಚೆ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
4) ಅಭ್ಯರ್ಥಿಗಳ ವಯಸ್ಸು ಈ ಮೇಲ್ಕಂಡ ತರಬೇತಿ ಸಂಸ್ದೆಗಳು ನಿಗಧಿ ಪಡಿಸಿರುವಂತೆ ವಯೋಮಿತಿಯಲ್ಲಿರಬೇಕು.
5) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.
6) ತರಬೇತಿ ಶುಲ್ಕವೆಂದರೆ ಪ್ರವೇಶ ಶುಲ್ಕ, ವಾರ್ಷಿಕ ಭೋದನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕಗಳನ್ನು ಪಾವತಿಸಿರುವ ಬಗ್ಗೆ ರಶೀದಿಯ ದಾಖಲೆಗಳು ಅಥವಾ ಪಾವತಿ ಸಬೇಕಾದ ಶುಲ್ಕದ ವಿವರಗಳನ್ನು ಸದರಿ ಸಂಸ್ಥೆಗಳ ಮುಖ್ಯಸ್ಥರುಗಳಿಂದ ವಲಯ ಕಚೇರಿಗ ಳಿಗೆ ಸಲ್ಲಿಸಿದ ನಂತರ, ತರಬೇತಿ ಶುಲ್ಕವನ್ನು ಪಾವತಿಸುವುದು ಅಥವಾ ಸಂಸ್ಥೆಯಲ್ಲಿ ಆಯ್ಕೆಯಾದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಲ್ಲಿ ಮರುಪಾವತಿ ನೀಡುವ ಪತ್ರವನ್ನು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯಿಂದ ನೀಡುವುದು.
7) ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯ ನಡುವೆ ಬಿಡದಿರುವ ಬಗ್ಗೆ, ತರಬೇತಿಯ ಮಧ್ಯದಲ್ಲಿ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿ ಕೊಡುವ ಬಗ್ಗೆ ಘೋಷಣೆ ಪತ್ರವನ್ನು ಹಾಗೂ ಈ ಸೌಲಭ್ಯವನ್ನು ಸರ್ಕಾರ / ಸರ್ಕಾರ ಸ್ವಾಮ್ಯದ ಸಂಸ್ದೆಗಳಿಂದ ಪಡೆಯದಿರುವ ಬಗ್ಗೆ ಪೋಷಕರಿಂದ ರೂ.20/-ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. <u>ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ</u>.
8) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**D) <u>ಆಯ್ಕೆ ವಿಧಾನ:-</u>**

i) ತರಬೇತಿ ನೀಡುವ ಸಂಬಂಧಪಟ್ಟ ಸಂಸ್ದೆಗಳಿಂದ ಅಭ್ಯರ್ಥಿಗಳು ಆಯ್ಕೆಯಾಗಿರಬೇಕು.
ii) ತರಬೇತಿ ನೀಡುವ ಸಂಸ್ಥೆಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಡಿಯಲ್ಲಿ ವಿನಾಯಿತಿ ಪಡೆದಿರಬೇಕು ಅಥವಾ ಆಯ್ಕೆಯಾಗಬೇಕು.
iii) ಆಯಾ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನ ಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿ ಪಡಿಸಿ ಅರ್ಜಿಯನ್ನು ಸ್ವೀಕರಿಸತಕ್ಕದ್ದು.

**3ನೇ ಪುಟಕ್ಕೆ -----**

iv) ಅರ್ಹ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ವಲಯದ ಅಪರ/ ಜಂಟಿ ಆಯುಕ್ತರವರ ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂದಪಟ್ಟ ವಲಯ ಕಚೇರಿಗಳಿಗೆ ನಿಗಧಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

v) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

vi) ವಲಯವಾರು ಅಪರ / ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆಯನ್ನು ಪೂರ್ಣಗೊಳಿಸಲಾಗುವುದು.

| | | |
|---|---|---|
| 1. ವಲಯ ಅಪರ /ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಸಂಬಂಧಪಟ್ಟ ಸಂಸ್ಥೆಗಳ ಪ್ರತಿನಿಧಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

E) **ತರಬೇತಿಯ ವಿವರಗಳು :-**

a. ಅಭ್ಯರ್ಥಿಯು ಶೇ. 90 ಕ್ಕೂ ಮೇಲ್ಪಟ್ಟು ಹಾಜರಾತಿಯು ಕಡ್ಡಾಯವಾಗಿ ಇರತಕ್ಕದ್ದು.

b. ಅಭ್ಯರ್ಥಿಯು ತರಬೇತಿ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಕಾಲ ಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

c. ತರಬೇತಿಯ ನಂತರ ವಾರ್ಷಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

d. ಅಭ್ಯರ್ಥಿಯ ವಾರ್ಷಿಕ ಪರೀಕ್ಷೆಯ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಗೂ ಉತ್ತೀರ್ಣರಾದ ಪರೀಕ್ಷೆಯ ಪ್ರಮಾಣ ಪತ್ರವನ್ನು ಸಂಬಂದಪಟ್ಟ ಪಾಲಿಕೆಯ ವಲಯ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.

**ವಿಶೇಷ/ ಅಪರ ಆಯುಕ್ತರು(ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಶೇ.22.75ರ ಅನುದಾನದಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದ ಕಾರ್ಯಕ್ರಮಗಳು-ಕ್ರಿಯಾಯೋಜನೆ

1) **ವಾಹನಾ ಚಾಲನಾ ತರಬೇತಿ**

**ಕಾರ್ಯಕ್ರಮದ ಉದ್ದೇಶ:**

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಮತ್ತು ಹಿಂದುಳಿದ ಅಲ್ಪಸಂಖ್ಯಾತ ವರ್ಗದವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 1) ಲಘುವಾಹನ ಚಾಲನಾ ತರಬೇತಿ 2) ಭಾರಿ ವಾಹನ ಚಾಲನಾ ತರಬೇತಿ 3)ಆಟೋರಿಕ್ಷಾ ಚಾಲನಾ ತರಬೇತಿ ನೀಡಿ ಸದರಿ ವರ್ಗದ ಅಭ್ಯರ್ಥಿಗಳಿಗೆ ಉಚಿತವಾಗಿ ಡ್ರೈವಿಂಗ್ ಲೈಸೆನ್ಸ್ ಅನ್ನು ಸಿಗುವಂತೆ ಮಾಡುವುದೇ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

ಸದರಿ ಕಾರ್ಯಕ್ರಮದಲ್ಲಿ ಉಚಿತ ವಾಹನಾ ಚಾಲನಾ ತರಬೇತಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಇದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ.

**ಃ. ಅರ್ಹತೆಗಳು:**

n. ಈ ಕಾರ್ಯಕ್ರಮದಲ್ಲಿ ಅರ್ಜಿಸಲ್ಲಿಸುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವಯಸ್ಸು 18ರಿಂದ 40 ವರ್ಷಗಳಾಗಿರಬೇಕು. ಮತ್ತು ಹಿಂದುಳಿದ ಅಲ್ಪಸಂಖ್ಯಾತ ವರ್ಗದವರಿಗೆ ವಯಸ್ಸು 18ರಿಂದ 35ವರ್ಷಗಳಾಗಿರಬೇಕು.

o. ಅಭ್ಯರ್ಥಿಗಳು ಕನಿಷ್ಟ 7 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

p. ಅಭ್ಯರ್ಥಿಯು ಆಯ್ಕೆಯಾದ ನಂತರ 20-00 ರೂ. ಛಾಪಾ ಕಾಗದದಲ್ಲಿ ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋಗುವುದಿಲ್ಲವೆಂದು ಒಂದು ವೇಳೆ ಬಿಟ್ಟು ಹೋದಲ್ಲಿ ವೆಚ್ಚದ ಮೊತ್ತವನ್ನು ಭರಿಸಿ ಕೊಡುವುದಾಗಿ ಒಪ್ಪಿರುತ್ತೇನೆಂದು ಮುಚ್ಚಳಿಕೆ ಪತ್ರ ನೀಡಬೇಕು.

q. ಅಭ್ಯರ್ಥಿಯ ವಾರ್ಷಿಕ ಆದಾಯ ಮಿತಿ ಹಿಂದುಳಿದವರಿಗೆ ರೂ.22,000 ಅಲ್ಪಸಂಖ್ಯಾತ ವರ್ಗದರಿಗೆ ರೂ. 2ಲಕ್ಷ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ವಾರ್ಷಿಕ ಆದಾಯ ಮಿತಿ 1ಲಕ್ಷ ಆಗಿರಬೇಕು.

r. ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಸಿಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

s. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಸಿಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

t. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

u. ಅರ್ಜಿದಾರರು 5 ಬಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.

**ಅ. ಆಯ್ಕೆ ವಿಧಾನ:**

a. ವಾಹನಾ ಚಾಲನಾ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡತಕ್ಕದ್ದು.
b. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.
c. ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | |
|---|---|
| **ವಲಯ ಜಂಟಿ ಆಯುಕ್ತರು** | **–ಅಧ್ಯಕ್ಷರು** |
| **ವಲಯ ಉಪ ಆಯುಕ್ತರು** | **–ಉಪಾಧ್ಯಕ್ಷರು** |
| **ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿ ನಿಧಿ** | **–ಸದಸ್ಯರು** |
| **ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು** | **–ಸದಸ್ಯ ಕಾರ್ಯದರ್ಶಿ** |

d. ವಲಯದಲ್ಲಿನ ವಾರ್ಡ್‌ವಾರು ಪ.ಜಾ/ಪ.ಪಂ/ ಹಿಂದುಳಿದ ವರ್ಗ /ಅಲ್ಪಸಂಖ್ಯಾತ ವರ್ಗದವರ ಜನಸಂಖ್ಯಾ ಅನುಗುಣವಾಗಿ ಭೌತಿಕ ಗುರಿಯನ್ನು ನಿಗದಿಪಡಿಸಿಕೊಂಡು ನಿಯಮಾನುಸಾರವಾಗಿ ಆಯ್ಕೆ ಮಾಡತಕ್ಕದ್ದು.
e. ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.
f. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.
g. ಆಯ್ಕೆಯಾದ ಅಂತಿಮ ಪಟ್ಟಿಯನ್ನು ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.
h. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಕಾಯ್ದುಕೊಳ್ಳುವುದು.
i. ಒಂದು ವೇಳೆ ಅಂತಿಮ ಆಯ್ಕೆ ಪಟ್ಟಿಯ ಅಭ್ಯರ್ಥಿಗಳು ತರಬೇತಿಗೆ ಹಾಜರಾಗದಿದ್ದಲ್ಲಿ ನಿಯಮಾನುಸಾರ ಹೆಚ್ಚುವರಿ ಪಟ್ಟಿಯ ಅಭ್ಯರ್ಥಿಗಳನ್ನು ತರಬೇತಿಗೆ ನಿಯೋಜಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

**ಆ. ತರಬೇತಿಯ ವಿವರಗಳು:**

ಅಭ್ಯರ್ಥಿಯು ಶೇ.90ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.

ಅಭ್ಯರ್ಥಿಯು ತರಬೇತಿ ನೀಡುವ ವಾಹನಾ ಚಾಲನಾ ತರಬೇತಿ ಶಾಲೆಯವರು ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

**ಇ. ತರಬೇತಿ ನೀಡುವ ಸಂಸ್ಥೆಗಳ ಆಯ್ಕೆ ವಿಧಾನ ಮತ್ತು ಅರ್ಹತೆಗಳು:**

1. ತರಬೇತಿ ನೀಡುವ ಬಗ್ಗೆ ವಾಹನಾ ಚಾಲನಾ ತರಬೇತಿ ಶಾಲೆಯವರು ಕರ್ನಾಟಕ/ಭಾರತ ಸರ್ಕಾರದಿಂದ ನೊಂದಾಯಿತ ಸಂಸ್ಥೆಯಾಗಿದ್ದು ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಪರವಾನಗಿ ಪಡೆದಿರಬೇಕು. ಪ್ರಸಕ್ತ ಸಾಲಿಗೆ ನವೀಕರಿಸಿರಬೇಕು.

2. ತರಬೇತಿ ನೀಡುವ ವಾಹನಾ ಚಾಲನಾ ತರಬೇತಿ ಶಾಲೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ನೊಂದಾಯಿಸಿಕೊಂಡಿರಬೇಕು.

3. ತರಬೇತಿ ವಾಹನಾ ಚಾಲನಾ ತರಬೇತಿ ಶಾಲೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತರಬೇತಿ ಕೇಂದ್ರವನ್ನು ಹೊಂದಿರಬೇಕು.

4. ತರಬೇತಿಗೆ ಪ್ರಾಯೋಜಿಸಲಾಗುವ ಅಭ್ಯರ್ಥಿಗಳ ಹಾಜರಾತಿಗೆ ವಾಹನಾ ಚಾಲನಾ ತರಬೇತಿ ಶಾಲೆಯವರು ಬಯೋ- ಮೆಟ್ರಿಕ್ ಪದ್ದತಿಯನ್ನು ಅಳವಡಿಸಿರಬೇಕು.

5. ವಾಹನಾ ಚಾಲನಾ ತರಬೇತಿ ಶಾಲೆಯವರು ತರಬೇತಿ ನೀಡಲು ಅವಶ್ಯಕ ಮೂಲಭೂತ ಸೌಕರ್ಯ ಹೊಂದಿರಬೇಕು. ಸುಸಜ್ಜಿತ ಕೊಠಡಿಗಳು, ತರಬೇತಿಗೆ ಬೇಕಾದ ಲಘುವಾಹನ ಭಾರಿವಾಹನ ಆಟೋರಿಕ್ಷಾ ಮತ್ತು ವಿಷಯವಾರು ಪರಿಣತಿ ಹೊಂದಿದ ಚಾಲಕರುಗಳ ವಿವರಗಳನ್ನು ನೀಡಬೇಕು.

6. ಕಳೆದ 3 ಸಾಲಿನ ಆಡಿಟ್ ಮಾಡಿದ ಆಡಿಟ್ ವರದಿಗಳನ್ನು ನೀಡಬೇಕು.

7. ಆಟೋ ಮೊಬೈಲ್ ಡಿಪ್ಲೊಮೋ ಪದವಿ ಹೊಂದಿರುವ ವಾಹನ ಚಾಲನಾ ಬೋಧಕರುಇರಬೇಕು.

8. ಲಘು ವಾಹನಾ, ಭಾರಿ ವಾಹನಗಳ ಬಿಡಿ ಭಾಗಗಳ ಸೂಕ್ತ ವ್ಯವಸ್ಥೆ ಇರಬೇಕು.

9. ತರಬೇತಿ ಕೊಠಡಿಯಲ್ಲಿ ಸಂಚಾರ ನಿಯಮಗಳ ಎಲ್ಲಾ ಸೂಚನಾ ಫಲಕಗಳ ಚಿಹ್ನೆಗಳ ವಿವರಗಳು ಇರಬೇಕು.

10. ವಾಹನಗಳನ್ನು ನಿಲ್ಲಿಸಲು ನಿಲ್ದಾಣ ವಿರಬೇಕು.

11. ತರಬೇತಿ ನೀಡುವ ವಾಹನಕ್ಕೆ ಎರಡು ನಿಯಂತ್ರಣಾ ವ್ಯವಸ್ಥೆ ಇರಬೇಕು.

**ಈ. ಕಾರ್ಯಕ್ರಮವನ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ. ಕಾಯ್ದೆಯನುಸಾರ ಅನುಷ್ಠಾನಗೊಳಿಸಬೇಕು.**

**(ಸಹಿ/-)**
**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

## ನಿರುದ್ಯೋಗಿಗಳಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ (ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಗೆ ಸಹಾಯಧನ) – ಮಾರ್ಗಸೂಚಿಗಳು (ಪರಿಷ್ಕೃತ):–

## Economic Support Programme for Unemployed Youths (subsidy for self employment through Development Corporations/Bank Loan)

### A) ಕಾರ್ಯಕ್ರಮದ ಉದ್ದೇಶ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯವರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಅಭಿವೃದ್ಧಿ ನಿಗಮಗಳು/ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳ ಸಾಲದ ಮುಖಾಂತರ ವಾಹನಗಳನ್ನು ಖರೀದಿಸಲು ಅಥವ ಉದ್ಯಮ ಮತ್ತು ವ್ಯಾಪಾರವನ್ನು ಪ್ರಾರಂಭಿಸಲು ಪಾಲಿಕೆಯಿಂದ ಸಹಾಯಧನವನ್ನು ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

### B) ಕಾರ್ಯಕ್ರಮದ ವಿವರಣೆ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿಗಳು ಕನಿಷ್ಠ ಶೇ.5ರಷ್ಟು ಅಥವಾ ಗರಿಷ್ಠ ಪ್ರಾರಂಭಿಕ ಠೇವಣಿ ರೂ.25,000/–ಗಳನ್ನು ಪಾವತಿಸಿದಲ್ಲಿ ಅಭಿವೃದ್ಧಿ ನಿಗಮಗಳು/ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಸಾಲದ ಮುಖಾಂತರ ಗರಿಷ್ಠ ರೂ.4.50 ಲಕ್ಷಗಳ ಮೌಲ್ಯದ ವಾಹನವನ್ನು ಖರೀದಿಸಲು ಅಥವಾ ಉದ್ಯಮ/ವ್ಯಾಪಾರವನ್ನು ಪ್ರಾರಂಭಿಸಲು ಸಹಾಯಧನವನ್ನು ಈ ಕೆಳಕಂಡಂತೆ ನೀಡಲಾಗುವುದು.

1) ಗರಿಷ್ಠ ರೂ.4.50 ಲಕ್ಷಗಳ ಮೌಲ್ಯದ ಯಾವುದೇ ವಾಹನವನ್ನು ಖರೀದಿಸಲು ಗರಿಷ್ಠ ರೂ.1.00 ಲಕ್ಷಗಳ ಮಿತಿಗೊಳಪಟ್ಟು ಸಹಾಯಧನವನ್ನು ಪಾಲಿಕೆಯಿಂದ ಬಿಡುಗಡೆ ಮಾಡಲಾಗುವುದು.

2) ಉದ್ಯಮ/ವ್ಯಾಪಾರವನ್ನು ಪ್ರಾರಂಭಿಸಲು ಗರಿಷ್ಠ ಸಹಾಯಧನ ರೂ.1.00ಲಕ್ಷಗಳ ಮಿತಿಗೊಳಪಟ್ಟು ಅಥವಾ ಸಾಲದ ಮೊತ್ತದ ಶೇ.25ರಷ್ಟು ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

### C) ಅರ್ಹತೆಗಳು:–

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

3) ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್ ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
5) ಅಭ್ಯರ್ಥಿಯ ವಯಸ್ಸು 18 ವರ್ಷಗಳ ಮೇಲ್ಪಟ್ಟಿರಬೇಕು.
6) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಡೀಕರಣವನ್ನು ರೂ.20/-ರ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸಹಾಯ ಧನಕ್ಕೆ ಅರ್ಹರಾಗಿರುವುದಿಲ್ಲ.
7) ಅರ್ಜಿದಾರರ ಇತ್ತೀಚಿನ 2 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.
8) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## D) <u>ಆಯ್ಕೆ ವಿಧಾನ:-</u>

i) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
ii) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.
iii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.
iv) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇ. 3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
v) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಅಪರ/ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ – ಸದಸ್ಯರು
4. ಸಂಬಂಧಪಟ್ಟ ಸರ್ಕಾರ/ಸರ್ಕಾರದ ನಿಗಮ/ಮಂಡಳಿ/ಸಂಸ್ಥೆಯ ಪ್ರತಿನಿಧಿಗಳು. – ಸದಸ್ಯರು
5. ಸಾಲಾ ಮಂಜೂರು ಮಾಡುವ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಪ್ರತಿನಿದಿಗಳು. – ಸದಸ್ಯರು
6. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ – ಸದಸ್ಯರು
7. ವಲಯದ ಕಲ್ಯಾಣಾಧಿಕಾರಿ – ಸದಸ್ಯ ಕಾರ್ಯದರ್ಶಿ

vi) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

vii) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

viii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ix) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

x) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

**ಅಪರ ಆಯುಕ್ತರು**
**(ಕಲ್ಯಾಣ/ಆರೋಗ್ಯ/ಆಸ್ತಿಗಳು)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ ಕಲ್ಯಾಣ ಕಾರ್ಯಕ್ರಮಗಳು

## ಎಲೆಕ್ಟ್ರಿಕಲ್ ವೈಯರಿಂಗ್ ವಿಷಯದಲ್ಲಿ ತರಬೇತಿ ಕಾರ್ಯಕ್ರಮ – ಮಾರ್ಗಸೂಚಿಗಳು:– Electrical Wiring Training Programme

### E) ಕಾರ್ಯಕ್ರಮದ ಉದ್ದೇಶ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಎಲೆಕ್ಟ್ರಿಕಲ್ ವೈಯರಿಂಗ್ ವಿಷಯದಲ್ಲಿ ವೃತ್ತಿ ತರಬೇತಿ ನೀಡಿ ಅವರುಗಳಿಗೆ ಜೀವನೋಪಾಯಕ್ಕಾಗಿ ಸದಾವಕಾಶವನ್ನು ಒದಗಿಸುತ್ತಾ, ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

### F) ಕಾರ್ಯಕ್ರಮದ ವಿವರಣೆ:–

ಪಾಲಿಕೆ ವತಿಯಿಂದ ನಡೆಸಲಾಗುತ್ತಿರುವ ವಾರ್ಡ್ ಸಂಖ್ಯೆ:78–ವಸಂತನಗರ, ಕ್ವೀನ್ಸ್ ರಸ್ತೆಯಲ್ಲಿನ ಎಲೆಕ್ಟ್ರಿಕಲ್ ವೈಯರ್‌ಮ್ಯಾನ್ ತರಬೇತಿ ಕೇಂದ್ರದಲ್ಲಿ ಒಂದು ವರ್ಷದ ಅವಧಿಯ ಎಲೆಕ್ಟ್ರಿಕಲ್ ವೈಯರಿಂಗ್ ವಿಷಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ ತರಬೇತಿಯನ್ನು ನೀಡಲಾಗುವುದು. ತರಬೇತಿ ಹೊಂದಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ತರಬೇತಿಯು ಮುಗಿದನಂತರ ಶಿಷ್ಯ ವೇತನ ಹಾಗೂ ಟೂಲ್ಸ್ ಕಿಟ್‌ಗಳನ್ನು ನೀಡಲಾಗುವುದು.

### G) ಅರ್ಹತೆಗಳು:–

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
3) ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.

**2ನೇ ಪುಟಕ್ಕೆ ---**

4) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.
5) ಅಭ್ಯರ್ಥಿಗಳ ವಿದ್ಯಾಭ್ಯಾಸವು ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣರಾಗಿರಬೇಕು.
6) ಅಭ್ಯರ್ಥಿಗಳ ವಯಸ್ಸು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ 18 ರಿಂದ 40 ವರ್ಷಗಳ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ 18 ರಿಂದ 35 ವರ್ಷಗಳ ಮಿತಿಯಲ್ಲಿರಬೇಕು.
7) ಅರ್ಜಿದಾರರು 2 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.
8) ತರಬೇತುದಾರರು ತರಬೇತಿಯ ಅವಧಿಯಲ್ಲಿ ಗೈರು ಹಾಜರಿ ಆದಲ್ಲಿ ಅಥವಾ ತರಬೇತಿಯನ್ನು ಅಪೂರ್ಣಗೊಳಿಸಿದ್ದಲ್ಲಿ ಪಾಲಿಕೆಗೆ ಸಂಭವಿಸಬಹುದಾದ ನಷ್ಟವನ್ನು ಭರಿಸಿಕೊಡುವ ಬಗ್ಗೆ ಬಿಳಿಯ ಹಾಳೆಯಲ್ಲಿ ಸ್ವಯಂ ಮುಚ್ಚಳಿಕೆ ಪತ್ರವನ್ನು ನೀಡಬೇಕು.
9) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## H) ಆಯ್ಕೆ ವಿಧಾನ:–

xi) ಸಂಬಂಧಪಟ್ಟ ವಲಯ ಕಛೇರಿಯಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
xii) ಅರ್ಹ ಅಭ್ಯರ್ಥಿಗಳು, ಸಂಬಂಧಪಟ್ಟ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗೆ ನಿಗಧಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.
xiii) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.
xiv) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಸರ್ಕಾರಿ ಪಾಲಿಟೆಕ್ನಿಕ್‌ನ ಎಲೆಕ್ಟ್ರಿಕಲ್ ವಿಷಯದ ಓರ್ವ ಪ್ರತಿನಿಧಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

## I) ತರಬೇತಿಯ ವಿವರ:–

1) ಈ ತರಬೇತಿಯನ್ನು ಆಯಾ ಶೈಕ್ಷಣಿಕ ವರ್ಷದಲ್ಲಿ ಜೂನ್ ತಿಂಗಳಿಂದ ಮೇ ತಿಂಗಳವರೆಗೆ ಒಂದು ವರ್ಷದ ಅವಧಿಗೆ ತರಬೇತಿಯನ್ನು ನೀಡುವುದು. (ಅಭ್ಯರ್ಥಿಗಳ ಆಯ್ಕೆಯ ಪಟ್ಟಿಯನ್ನು ಮೇ ತಿಂಗಳಿನಲ್ಲಿ ಪೂರ್ಣಗೊಳಿಸುವುದು. ಒಂದು ತಂಡಕ್ಕೆ ಗರಿಷ್ಠ 40 ಶಿಕ್ಷಣಾರ್ಥಿಗಳಿಗೆ ಅವಕಾಶವಿರುತ್ತದೆ.
2) ಸದರಿ ತರಬೇತಿಯು ಸಿದ್ಧಾಂತ (ಥಿಯರಿ) ಹಾಗೂ ಪ್ರಯೋಗಗಳು ಒಳಗೊಂಡಂತೆ ಈ ಕೆಳಕಂಡ ಪಠ್ಯ ವಿಷಯದಲ್ಲಿ ಪೂರ್ಣಗೊಳಿಸುವುದು.

3ನೇ ಪುಟಕ್ಕೆ ----



i) Study of Basic Electricity.
ii) Types of Electricity, Types of Electrical Circuits & Properties.
iii) Study of Conductors, Insulators & their Applications.
iv) Alternate Current Wiring circuits for Industrial, Commercial, Residential Buildings, Home Appliances, Electrical Motors & Generators.
v) Protection & Safety handling (Shocks & Awareness)
vi) Entrepreneurship Development Programme & Technical Sites visits.
vii) Term works & Project works.

3) ಈ ತರಬೇತಿಯಲ್ಲಿ ತರಬೇತುದಾರರ ಹಾಜರಾತಿಯು ಕನಿಷ್ಠ 90ರಷ್ಟು ಇರಬೇಕು.

4) ಪ್ರತಿ ತಿಂಗಳು ಮಾಸಿಕ ಪರೀಕ್ಷೆಯನ್ನು ನಡೆಸುವುದು ಹಾಗೂ ಈ ಪರೀಕ್ಷೆಯ ವರದಿಯನ್ನು ತರಬೇತುದಾರರ ಆಂತರಿಕ ಮೌಲ್ಯಮಾಪನಕ್ಕೆ ಇದನ್ನು ಪರಿಗಣಿಸುವುದು.

5) ಈ ಮೇಲ್ಕಂಡಂತೆ ತರಬೇತಿಯು ಪೂರ್ಣಗೊಂಡ ನಂತರ ಅಂತಿಮ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ, ಮುಖ್ಯ ವಿದ್ಯುತ್ ಪರಿವೀಕ್ಷಕರು, (Chief Electrical Inspectorate) ಮೈಶುಗರ್ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು ರವರ ಕಛೇರಿಯ ವತಿಯಿಂದ ಪರೀಕ್ಷೆಯನ್ನು ನಡೆಸುವುದು.

J) **ಸೌಲಭ್ಯಗಳ ವಿವರ:–**

1) ತರಬೇತಿ ಹೊಂದಿ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ತರಬೇತುದಾರರಿಗೆ ಪ್ರಮಾಣ ಪತ್ರವನ್ನು ನೀಡುವುದು.
2) ಈ ರೀತಿಯಲ್ಲಿ ಉತ್ತೀರ್ಣರಾದವರಿಗೆ ಪ್ರತಿ ತರಬೇತುದಾರರಿಗೆ ಶಿಷ್ಯ ವೇತನ ಮಾಸಿಕ ರೂ.200.00ಗಳಂತೆ ಒಂದು ವರ್ಷದ ಅವಧಿಗೆ ಒಟ್ಟು ರೂ.2400.00ಗಳನ್ನು ನೀಡುವುದು.
3) ತರಬೇತುದಾರರು ಮೇಲ್ಕಂಡ ವೃತ್ತಿಯಲ್ಲಿ ಸ್ವಾವಲಂಬಿಗಳಾಗಲು ತರಬೇತಿಯನ್ನು ಮುಗಿಸಿ ಉತ್ತೀರ್ಣರಾದವರಿಗೆ ಅವರ ವೃತ್ತಿಗೆ ಅನುಕೂಲವಾಗುವಂತೆ ಟೂಲ್ಸ್ ಕಿಟ್‌ಗಳನ್ನು ನೀಡುವುದು.

K) **ಈ ತರಬೇತಿ ಕಾರ್ಯಕ್ರಮದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.**

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು</u>

## <u>ವಿದ್ಯಾರ್ಥಿಗಳ ಶೈಕ್ಷಣಿಕ/ಅಧ್ಯಾಯನ ಪ್ರವಾಸಗಳಿಗೆ ಅದರ ವೆಚ್ಚವನ್ನು ಭರಿಸುವುದು–ಮಾರ್ಗಸೂಚಿಗಳು:–</u>
## <u>Expenditure for Students Educational/Study Tour</u>

### J) <u>ಕಾರ್ಯಕ್ರಮದ ಉದ್ದೇಶ:–</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಸರ್ಕಾರದ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಾಲಾ/ಕಾಲೇಜುಗಳಿಂದ ಹಮ್ಮಿಕೊಂಡಿರುವ ಶೈಕ್ಷಣಿಕ/ಅಧ್ಯಾಯನ ಪ್ರವಾಸಿಗಳಿಗೆ ಅದರ ವೆಚ್ಚವನ್ನು ಪಾಲಿಕೆ ವತಿಯಿಂದ ಭರಿಸಲಾಗುವುದು. ಶೈಕ್ಷಣಿಕ ಹಾಗೂ ಅಧ್ಯಯನ ಪ್ರವಾಸಗಳನ್ನು ಕೈಗೊಳ್ಳುವ ಶಾಲಾ/ ಕಾಲೇಜುಗಳನ್ನು ಮತ್ತು ಆ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಇದರಿಂದ ಶಾಲಾ/ಕಾಲೇಜು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ವಿಕಾಸಗೊಳ್ಳುತ್ತಾರೆ.

### K) <u>ಕಾರ್ಯಕ್ರಮದ ವಿವರಣೆ:–</u>

ಸರ್ಕಾರಿ ಹಾಗೂ ಸರ್ಕಾರದ ಅನುದಾನಿತ ಶಾಲಾ/ಕಾಲೇಜುಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಥವಾ ಅಧ್ಯಾಯನ ಪ್ರವಾಸಗಳನ್ನು ಕೈಗೊಂಡಿದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳ ಕಾಲೇಜುಗಳ ವಿಷಯವಾರು ಅಧ್ಯಾಯನ ಪ್ರವಾಸಗಳಿಗೆ ಹೋಗಿ ಬರಲು ಆಗುವ ವೆಚ್ಚಗಳನ್ನು ಕೇಂದ್ರ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ಆದೇಶದ ಸಂಖ್ಯೆ:11017/7/2002–ಋಅ–ಗಿ ದಿನಾಂಕ:28–01–2004ರ ಆದೇಶದನ್ವಯ ಪಾಲಿಕೆಯಿಂದ ಮರುಪಾವತಿ ಮಾಡಲಾಗುವುದು.

### L) <u>ಅರ್ಹತೆಗಳು:–</u>

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.

**2ನೇ ಪುಟಕ್ಕೆ ----**

– 2 –

2. ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.
3. ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
5. ಸರ್ಕಾರಿ ಹಾಗೂ ಸರ್ಕಾರದ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.
6. ಶಾಲಾ/ಕಾಲೇಜು ಮುಖ್ಯಸ್ಥರುಗಳು ಅನುಮೋದಿತ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವುದು.
7. ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ಧೃಡೀಕರಣವನ್ನು ಬಿಳಿಹಾಳೆಯಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಪ್ರವಾಸಗಳ ವೆಚ್ಚಗಳಿಗೆ ಅರ್ಹರಾಗಿರುವುದಿಲ್ಲ.
8. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## M) <u>ಆಯ್ಕೆ ವಿಧಾನ:-</u>

xv) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು ಅಥವ ಸಂಬಂಧಪಟ್ಟ ಶಾಲಾ/ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅಧ್ಯಾಯನದ ಪ್ರವಾಸಗಳನ್ನು ಕೈಗೊಂಡಾಗ ಅರ್ಜಿಗಳನ್ನು ಸ್ವೀಕರಿಸುವುದು.

xvi) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

xvii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xviii) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

**3ನೇ ಪುಟಕ್ಕೆ ---**

xix) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಕ್ಷೇತ್ರ ಶಿಕ್ಷಣಾಧಿಕಾರಿ / ಉಪ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | – | ಸದಸ್ಯರು |
| 5. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

xx) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xxi) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xxii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xxiii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xxiv) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

## N) ಶೈಕ್ಷಣಿಕ/ಅಧ್ಯಾಯನ ಪ್ರವಾಸಗಳ ವಿವರ:–

1) ಕೇಂದ್ರ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ಆದೇಶದ ಸಂಖ್ಯೆ:11017/7/2002–ಖಅಆ–ಗಿ ದಿನಾಂಕ:28–01–2004ರ ಆದೇಶದಲ್ಲಿ ನಿಗಧಿಪಡಿಸಿರುವ ದರಗಳನ್ವಯ ಪ್ರವಾಸದ ವೆಚ್ಚಗಳನ್ನು ಮರುಪಾವತಿ ಮಾಡುವುದು.
2) ಶೈಕ್ಷಣಿಕ/ಅಧ್ಯಯನ ಪ್ರವಾಸದ ವೆಚ್ಚಗಳನ್ನು ಪ್ರತಿ ವಿದ್ಯಾರ್ಥಿಗೆ ಗರಿಷ್ಠ ರೂ.1000 ಮಿತಿಗೊಳಪಟ್ಟು ಮರು ಪಾವತಿ ಮಾಡಲಾಗುವುದು.
3) ಪ್ರತಿ ವಿದ್ಯಾರ್ಥಿಗೆ ಶೈಕ್ಷಣಿಕ/ಅಧ್ಯಯನ ಪ್ರವಾಸದ ವೆಚ್ಚವನ್ನು ವಾರ್ಷಿಕ ಒಂದು ಬಾರಿ ಮಾತ್ರ ನೀಡುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

### ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ:- ಮಾರ್ಗಸೂಚಿಗಳು

### Financial Assistance to Students Attending for Higher Education Interviews

**ಕಾರ್ಯಕ್ರಮದ ಉದ್ದೇಶ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗಲು ಅನುಕೂಲವಾಗುವಂತೆ ಆರ್ಥಿಕ ಸಹಾಯ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**ಕಾರ್ಯಕ್ರಮದ ವಿವರಣೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಡಕ್ಕೆ ಸೇರಿದ ಅಭ್ಯರ್ಥಿಗಳು ಪಾಲಿಕೆಯ ವ್ಯಾಪ್ತಿಯನ್ನು ಹೊರತುಪಡಿಸಿ, ರಾಜ್ಯ ಹಾಗೂ ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸದರಿ ಸ್ಥಳಗಳಿಗೆ ಹೋಗಿ ಬರಲು ಬಸ್ ಅಥವಾ ರೈಲು ಪ್ರಯಾಣದ ಎರಡನೇ ದರ್ಜೆಯ ವೆಚ್ಚವನ್ನು ಭರಿಸಲಾಗುವುದು. ಈ ರೀತಿ ಪ್ರಯಾಣ ಬೆಳೆಸಲು ಹೋಗಿ ಬರಲು ಪ್ರಯಾಣ ವೆಚ್ಚಗಳ ದಾಖಲಾತಿ ಗಳನ್ನು ಹಾಗೂ ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನದ ಹಾಜರಾತಿಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ಅದರ ವೆಚ್ಚವನ್ನು ಮರು ಪಾವತಿಯನ್ನು ಮಾಡಲಾಗುವುದು.

**ಅರ್ಹತೆಗಳು:-**

13) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).

14) ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**2ನೇ ಪುಟಕ್ಕೆ ----**

15) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.

16) ವಿದ್ಯಾರ್ಥಿಗಳ ವಯಸ್ಸು ರಾಜ್ಯ/ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ನಿಗದಿಪಡಿಸಿರುವಂತೆ ವಯೋಮಿತಿಯಲ್ಲಿರಬೇಕು.

17) ರಾಜ್ಯ/ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗಲು ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕು.

18) ವಿದ್ಯಾರ್ಥಿಗಳ ಕುಟುಂಬಗಳ ಅದಾಯ ರೂ.1.00ಲಕ್ಷದ ಮಿತಿಯಲ್ಲಿರಬೇಕು / ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.

19) ವಿದ್ಯಾರ್ಥಿಯು ಪಾಲಿಕೆಯ ವ್ಯಾಪ್ತಿಯನ್ನು ಹೊರತುಪಡಿಸಿ ರಾಜ್ಯ/ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಲೇಜುಗಳಲ್ಲಿ ಯಾವುದೇ ಸ್ಥಳಕ್ಕೆ ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗಲು ಈಗಾಗಲೇ ಆಗಿರುವ ಬಸ್ ಹಾಗೂ ಎರಡನೇ ದರ್ಜೆ ರೈಲು ಪ್ರಯಾಣಕ್ಕೆ ಖರ್ಚಾಗಿರುವ ಪ್ರಯಾಣದ ಚೀಟಿಯ ವೆಚ್ಚದ ದಾಖಲಾತಿಯನ್ನು ಹಾಜರು ಪಡಿಸಬೇಕು.

20) ಸಂದರ್ಶನಕ್ಕೆ ಹಾಜರಾದ ವಿದ್ಯಾರ್ಥಿಗಳು ಹಾಜರಾತಿ ಪ್ರಮಾಣ ಪತ್ರವನ್ನು ಖಡ್ಡಾಯವಾಗಿ ಸಲ್ಲಿಸಬೇಕು.

21) ಈ ಸೌಲಭ್ಯವನ್ನು ಸರ್ಕಾರ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆಯದೇ ಇರುವ ಬಗ್ಗೆ ಬಿಳಿ ಕಾಗದದಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.

22) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

23) ಅರ್ಜಿದಾರರ ಇತ್ತೀಚಿನ 2 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.

24) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**ಆಯ್ಕೆ ವಿಧಾನ:-**

xx) ವಲಯ ಕಚೇರಿಗಳಿಂದ ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಹ ವಿದ್ಯಾರ್ಥಿಗಳಿಂದ ಆಹ್ವಾನಿಸುವುದು ಅಥವ ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗಲು ಆಹ್ವಾನಿಸಿದ ಸಮಯದಲ್ಲಿ ಅರ್ಜಿಗಳನ್ನು ವಿತರಿಸುವುದು.

xxi) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ಗುರಿಯನ್ನು ನಿಗಧಿ ಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

XXII) ಅರ್ಹ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವಲಯ ಕಚೇರಿಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಸಂಬಂದಪಟ್ಟ ವಲಯ ಕಛೇರಿಗಳಿಗೆ ಹಿಂತಿರುಗಿಸುವುದು.

XXIII) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

xxiv)ವಲಯವಾರು ಅಪರ / ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆಯನ್ನು ಪೂರ್ಣಗೊಳಿಸಲಾಗುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಜಿಲ್ಲಾ/ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

xxv) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xxvi)ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xxvii) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xxviii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xxix)ಪ್ರಥಮ ಪಟ್ಟಿಯಲ್ಲಿ ಅರ್ಹರಾದ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ**
**ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

### ಕ್ರೀಡಾ ಚಟುವಟಿಕೆಗಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ – ಮಾರ್ಗಸೂಚಿಗಳು:–

### Financial Support to Encourage Students for Sports Events

**L) ಕಾರ್ಯಕ್ರಮದ ಉದ್ದೇಶ:–**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಾಲ್ಲೂಕು/ಜಿಲ್ಲಾ/ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ನಡೆಯುವ ವಿವಿಧ ಕ್ರೀಡೆಗಳ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಪಾಲಿಕೆಯಿಂದ ಅದರ ವೆಚ್ಚವನ್ನು ಭರಿಸಲಾಗುವುದು. ಸದರಿ ಸಮುದಾಯದ ಕ್ರೀಡಾಗಾರರನ್ನು ಉತ್ತೇಜನ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**M) ಕಾರ್ಯಕ್ರಮದ ವಿವರಣೆ:–**

ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಾಗೂ ಇದರ ವ್ಯಾಪ್ತಿಯಲ್ಲಿನ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ತಾಲ್ಲೂಕು/ಜಿಲ್ಲಾ/ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ನಡೆಯುವ ಹಾಕಿ, ಕಬ್ಬಡಿ, ಕೋಕೋ, ವಾಲಿಬಾಲ್, ಥ್ರೋಬಾಲ್, ಪುಟ್‌ಬಾಲ್, ಬ್ಯಾಡ್ಮಿಂಟನ್, ಅಥ್ಲೆಟಿಕ್ಸ್, ಫೀಲ್ಡ್ ಈವೆಂಟ್ಸ್ ಹಾಗೂ ಇತರೆ ಕ್ರೀಡೆಗಳ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾಗಾರರಿಗೆ ಅದರ ಪ್ರವೇಶ ಶುಲ್ಕ, ಬಸ್ ಅಥವಾ ಎರಡನೆ ದರ್ಜೆಯ ರೈಲು ಪ್ರಯಾಣದ ವೆಚ್ಚ ಹಾಗೂ ತಂಗುವ ವೆಚ್ಚಗಳನ್ನು ಕರ್ನಾಟಕ ರಾಜ್ಯ ಸರ್ಕಾರ, ಯುವಜನ ಸೇವೆ ಹಾಗೂ ಕ್ರೀಡೆ ಇಲಾಖೆಯು ನಿಗಧಿಪಡಿಸುವ ದರಗಳನ್ವಯ ಪಾಲಿಕೆಯಿಂದ ಮರುಪಾವತಿಸಲಾಗುವುದು.

**N) ಅರ್ಹತೆಗಳು:–**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.

2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿರುವುದಕ್ಕೆ ತಹಸೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

3) ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡುವುದು.

4) ತಾಲ್ಲೂಕು/ಜಿಲ್ಲಾ/ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ನಡೆಯುವ ವಿವಿಧ ಕ್ರೀಡೆಗಳ ಪಂದ್ಯವಳಿಗಳಿಗೆ ಭಾಗವಹಿಸಲು ತಿಳಿಸಿರುವ ಆಹ್ವಾನ ಪತ್ರಗಳ ಪ್ರತಿಗಳೊಂದಿಗೆ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಂಬಂಧಪಟ್ಟ ಮುಖ್ಯಸ್ಥರುಗಳಿಂದ ದೃಢೀಕರಣ ಪತ್ರವನ್ನು ಸಲ್ಲಿಸಬೇಕು.

5) ಈ ಮೇಲೆ ತಿಳಿಸಿರುವ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿರುವುದಕ್ಕೆ ಸಂಬಂಧಿಸಿದ ಕ್ರೀಡಾ ಇಲಾಖೆ/ಸಂಸ್ಥೆಗಳಿಂದ ಹಾಜರಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

6) ವಿವಿಧ ಕ್ರೀಡೆಗಳ ಪಂದ್ಯಾವಳಿಗಳಲ್ಲಿ ಭಾಗವಹಿಸಲು ತಗಲುವ ಪ್ರವೇಶ ಶುಲ್ಕ, ಬಸ್ ಅಥವಾ ಎರಡನೆ ದರ್ಜೆಯ ರೈಲು ಪ್ರಯಾಣದ ವೆಚ್ಚ ಹಾಗೂ ಸದರಿ ಸ್ಥಳದಲ್ಲಿ ತಂಗುವ ವೆಚ್ಚವನ್ನು ಕರ್ನಾಟಕ ಸರ್ಕಾರ, ಯುವಜನ ಸೇವೆ ಹಾಗೂ ಕ್ರೀಡೆ ಇಲಾಖೆಯಲ್ಲಿ ನಿಗಧಿಪಡಿಸಿರುವ ದರಗಳನ್ವಯ ಒಟ್ಟು ತಗಲುವ ವೆಚ್ಚವನ್ನು ಪಾಲಿಕೆಯಿಂದ ಅದನ್ನು ಮರುಪಾವತಿ ಮಾಡಲಾಗುವುದು.

7) ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## O) <u>ಆಯ್ಕೆ ವಿಧಾನ:-</u>

xxv) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಪಂದ್ಯಾವಳಿಗಳು ನಡೆಯುವ ಸಮಯದಲ್ಲಿ ಅರ್ಜಿಗಳನ್ನು ವಿತರಿಸುವುದು.

xxvi) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

xxvii) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xxviii) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 5. ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಪ್ರತಿನಿಧಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

### ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬದ ಮಕ್ಕಳಿಗೆ ಶಿಶು ವಿಹಾರ ಹಾಗೂ ಬಾಲವಾಡಿಗಳನ್ನು ನಿರ್ಮಿಸಲು ಅನುದಾನ - ಮಾರ್ಗಸೂಚಿಗಳು:-

Grants for Construction of Crèches for SC/ST Infants.

**C) ಕಾರ್ಯಕ್ರಮದ ಉದ್ಧೇಶ:-**

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸ್ವಾಧೀನದಲ್ಲಿರುವ ಬಿ.ಡಿ.ಎ./ ನಗರ ಪಾಲಿಕೆ ಹಾಗೂ ಇತರೆ ಸರ್ಕಾರದ ಸಂಸ್ಥೆಗಳ ಸರ್ಕಾರದ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬದ ಮಕ್ಕಳಿಗೆ ಶಿಶು ವಿಹಾರ ಹಾಗೂ ಬಾಲವಾಡಿಗಳನ್ನು ಪಾಲಿಕೆ ವತಿಯಿಂದ ನಿರ್ಮಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**D) ಕಾರ್ಯಕ್ರಮದ ವಿವರಣೆ:-**

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸ್ವಾಧೀನದಲ್ಲಿರುವ ಬಿ.ಡಿ.ಎ./ ನಗರ ಪಾಲಿಕೆ ಹಾಗೂ ಇತರೆ ಸರ್ಕಾರದ ಸಂಸ್ಥೆಗಳ ಸರ್ಕಾರದ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬದ ಮಕ್ಕಳಿಗೆ ಪಾಲಿಕೆಯ ಮುಖ್ಯ ಅಭಿಯಂತರು(ಕಲ್ಯಾಣ) ರವರ ಕಛೇರಿಯಿಂದ ನಿವೇಶನಗಳನ್ನು ಗುರುತಿಸಿ, ನಿವೇಶನದ ದಾಖಲಾತಿಗಳನ್ನು ಪರಿಶೀಲಿಸಿ, ವಸತಿ ನಿಲಯಗಳ ಅಂದಾಜು ವೆಚ್ಚವನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಅವುಗಳನ್ನು ನಿರ್ಮಿಸುವುದು. ಈ ಕಾರ್ಯಕ್ರಮವನ್ನು ಮುಖ್ಯ ಅಭಿಯಂತರರು (ಕಲ್ಯಾಣ) ಅಥವಾ ವಲಯ ಮುಖ್ಯ ಅಭಿಯಂತರರುಗಳ ಕಛೇರಿಗಳಿಂದ ಅನುಷ್ಠಾನ ಮಾಡುವುದು.

**E)** ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ

### ಮಾನವ ಸಂಪನ್ಮೂಲ ಅಭಿವೃದ್ಧಿ (ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಮತ್ತು ಬೌದ್ಧಿಕ ಅಭಿವೃದ್ಧಿ) – ಮಾರ್ಗಸೂಚಿಗಳು

### A. ಕಾರ್ಯಕ್ರಮದ ಉದ್ದೇಶ:–

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳು ವಿವಿಧ ಶೈಕ್ಷಣಿಕ ಮಟ್ಟದಲ್ಲಿ ಅರ್ಹತೆ ಹೊಂದಿ, ಆದರೆ ಆಂಗ್ಲ ಭಾಷೆಯಲ್ಲಿ ಪ್ರೌಢಿಮೆ ಇಲ್ಲದೆ/ಬೌದ್ಧಿಕ ಮಟ್ಟವು ಕಡಿಮೆಯುಳ್ಳವರಿಗೆ ವಿಶೇಷವಾದ ತರಬೇತಿಯನ್ನು ನೀಡಿ ಒಟ್ಟಾರೆಯಾಗಿ ಮಾನವ ಸಂಪನ್ಮೂಲವನ್ನು ಅಭಿವೃದ್ದಿ ಪಡಿಸುವ ಉದ್ದೇಶವಾಗಿರುತ್ತದೆ.

### B. ಕಾರ್ಯಕ್ರಮದ ವಿವರಣೆ:–

ಕನ್ನಡ ಭಾಷೆ ಹಾಗೂ ಇತರೆ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ/ಬೌದ್ಧಿಕ ಮಟ್ಟವು ಕಡಿಮೆ ಇದ್ದು ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿವಿಧ ಹುದ್ದೆಗಳಲ್ಲಿ ನಿಯೋಜಿಸಿಕೊಳ್ಳಲು, ಉತ್ತಮ ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳಿಗೆ ಸಂದರ್ಶನಗಳಿಗೆ ತಯಾರಾಗಲು, ಜೀವನ ನಿರ್ವಹಣೆಯಲ್ಲಿ ಸವಾಲುಗಳನ್ನು ಎದುರಿಸಲು ಹೀಗೆ ಇತ್ಯಾದಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳನ್ನು ತರಬೇತಿ ನೀಡುವ ಸಂಸ್ಥೆಗಳಿಗೆ ಪ್ರಾಯೋಜಿಸಿ, ಅವರುಗಳ ಪ್ರೌಢಿಮೆಯನ್ನು ವೃದ್ದಿಸಲಾಗುವುದು.

ಈ ತರಬೇತಿಗೆ ತಗಲುವ ವೆಚ್ಚವನ್ನು ಆಯ್ಕೆಯಾದ ಅಭ್ಯರ್ಥಿಗಳ ನಿಯೋಜಿತ ಸಂಸ್ಥೆಗಳಿಗೆ ಪಾವತಿಸಲಾಗುವುದು.

### C. ಅರ್ಹತೆಗಳು:–

ಅ) ಬೃಹತ್ ಬೆಂಗಳೂರು ಮಹಾನಗರ ಪಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು.

ಆ) ಅಭ್ಯರ್ಥಿಯು ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ, 10ನೇ ತರಗತಿ, ಪದವಿ ಪೂರ್ವ, ಪದವಿ ಹಾಗೂ ಉನ್ನತ ವ್ಯಾಸಂಗ ಮಾಡಿರಬೇಕು. (ವ್ಯಾಸಂಗದ ದೃಢೀಕರಣ ಪತ್ರವನ್ನು ನೀಡಬೇಕು)

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಈ) ಕನ್ನಡ ಅಥವಾ ಆಂಗ್ಲ ಭಾಷೆಗಳಲ್ಲಿ ಐಚ್ಛಿಕ ವಿಷಯವಾಗಿ ಶಿಕ್ಷಣ ಪಡೆದಿರಬೇಕು.

ಉ) ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ,ವಲಯ ಕಛೇರಿಯ ರಿಜಿಸ್ಟರ್, ವಸತಿ ಶಾಲೆಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

ಊ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು.

ಋ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.1.00ಲಕ್ಷದೊಳಗೆ ಇರಬೇಕು.

ಎ) ತರಬೇತುದಾರರು ತರಬೇತಿಗಳಿಗೆ ಗೈರು ಹಾಜರಿ ಅಥವಾ ತರಬೇತಿಯನ್ನು ಅಪೂರ್ಣಗೊಳಿಸುವ ಬಗ್ಗೆ ಬಿಳಿಯ ಹಾಳೆಯಲ್ಲಿ 2 ಸಾಕ್ಷಿಗಳೊಂದಿಗೆ ಸ್ವಯಂ ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

ಏ) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

## D. ಆಯ್ಕೆ ವಿಧಾನ:-

ಅ) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

ಆ) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಇ) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು - ಅಧ್ಯಕ್ಷರು
2. ವಲಯ ಉಪ ಆಯುಕ್ತರು - ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ- ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ - ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು - ಸದಸ್ಯ ಕಾರ್ಯದರ್ಶಿ

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ಎ) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ಏ) ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ವಸತಿ ಶಾಲೆಗಳಿಗೆ ಪ್ರಥಮ ವಾರದಲ್ಲಿ ವ್ಯಾಸಂಗಕ್ಕೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿ ಸಂಸ್ಥೆಗಳಿಗೆ ನಿಯೋಜಿಸುವುದು.

**E. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>

## <u>ಶೇ.18ರ ಅನುದಾನದಡಿಯ ಕಾರ್ಯಕ್ರಮಗಳು-ಕ್ರಿಯಾಯೋಜನೆ</u>

### <u>ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿಗಳಿಗೆ ಸಹಾಯ (ಮೋಬೈಲ್ ದುರಸ್ಥಿ)</u>

**<u>೧. ಕಾರ್ಯಕ್ರಮದ ಉದ್ದೇಶ:</u>**

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸ್ವಯಂ ಉದ್ಯೋಗ ಕೈಗೊಂಡು **<u>ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ</u>** ಅಡಿಯಲ್ಲಿ ಸ್ವಾವಲಂಬಿಗಳಾಗಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿ ಮೊಬೈಲ್ ಫೋನ್ ಬಳಕೆದಾರರು ಬಹಳ ಹೆಚ್ಚಾಗಿದ್ದು, ಮೋಬೈಲ್ ದುರಸ್ಥಿಗಳಿಗೆ ಅಪಾರವಾದ ಬೇಡಿಕೆ ಇರುತ್ತದೆ. ಆದ್ದರಿಂದ ಈ ತರಬೇತಿಯಿಂದ ನಿರುದ್ಯೋಗಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**<u>೩. ಕಾರ್ಯಕ್ರಮದ ವಿವರಣೆ:</u>**

ಬೆಂಗಳೂರು ನಗರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಲ್ಪಡುವ ಸಂಸ್ಥೆಗಳ ಮುಖಾಂತರ ಮೋಬೈಲ್ ದುರಸ್ಥಿ ತರಬೇತಿಯನ್ನು ಪ.ಜಾ/ಪ.ಪಂ.ದವರಿಗೆ ನೀಡಲಾಗುವುದು.

**<u>ಅ. ಅರ್ಹತೆಗಳು:</u>**

**a)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

**b)** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣರಾಗಿರಬೇಕು. (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪತ್ರ ಲಗತ್ತಿಸಿರಬೇಕು)

**c)** ಅಭ್ಯರ್ಥಿಯ ವಯಸ್ಸು, 18 ರಿಂದ 40ರೊಳಗೆ ವಯೋಮಿತಿಯಲ್ಲಿರಬೇಕು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪತ್ರ ಲಗತ್ತಿಸಿರಬೇಕು)

**d)** ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**e)** ತರಬೇತಿ ಮದ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮದ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ರೂ.20.00 ಛಾಪಾಕಾಗದಲ್ಲಿ ಮುಚ್ಚಳಿಕೆ ಪತ್ರ ಹಾಗೂ ಈ ಹಿಂದೆ ಸದರಿ ತರಬೇತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. <u>ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.</u>

f) ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

g) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1–00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.

**ಆ. ಆಯ್ಕೆ ವಿಧಾನ:**

a. ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

b. ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

c. ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

d. ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

i. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
ii. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
iii. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ – ಸದಸ್ಯರು
**ಌ ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ**

e. ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.

f. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

g. ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

h. ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

i. ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

j. ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ

ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**ಇ. ತರಬೇತಿಯ ವಿವರಗಳು:**

a. ಅಭ್ಯರ್ಥಿಯು ಶೇ.90 ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.

b. ಅಭ್ಯರ್ಥಿಯು ತರಬೇತಿ ನೀಡುವ ಸಂಸ್ಥೆಯು, ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

c. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

d. ಅಭ್ಯರ್ಥಿಯು ಪರೀಕ್ಷೆಯ ಪ್ರವೇಶ ಪತ್ರದ ಜೆ಼ರಾಕ್ಸ್ ಪ್ರತಿಯನ್ನು ಸಂಬಂಧ ಪಟ್ಟ ಪಾಲಿಕೆಯ ವಲಯ ಕಛೇರಿಗೆ ಕಡ್ಡಾಯವಾಗಿ ನೀಡಬೇಕು.

**ಈ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.**

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಕಲ್ಯಾಣ ಇಲಾಖೆಯ ಚಟುವಟಿಕೆಗಳು</u>
## <u>ಶೇ.18ರ ಅನುದಾನದಡಿಯ ಕಾರ್ಯಕ್ರಮಗಳು-ಕ್ರಿಯಾಯೋಜನೆ</u>

**<u>ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿಗಳಿಗೆ ಸಹಾಯ (ರೇಡಿಯೋ & ಟಿ.ವಿ. ದುರಸ್ಥಿ)</u>**

**<u>೦. ಕಾರ್ಯಕ್ರಮದ ಉದ್ದೇಶ:</u>**

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸ್ವಯಂ ಉದ್ಯೋಗ ಕೈಗೊಂಡು **<u>ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ</u>** ಅಡಿಯಲ್ಲಿ ಸ್ವಾವಲಂಬಿಗಳಾಗಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿ ಟಿ.ವಿ./ಡಿ.ವಿ.ಡಿ./ವಿ.ಸಿ.ಡಿ. ಬಳಕೆದಾರರು ಬಹಳ ಹೆಚ್ಚಾಗಿದ್ದು, ಈ ಉಪಕರಣಗಳ ದುರಸ್ಥಿಗೆ ಅಪಾರವಾದ ಬೇಡಿಕೆ ಇರುತ್ತದೆ. ಆದ್ದರಿಂದ ಈ ದುರಸ್ಥಿ ತರಬೇತಿಯಿಂದ ನಿರುದ್ಯೋಗಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**<u>೩. ಕಾರ್ಯಕ್ರಮದ ವಿವರಣೆ:</u>**

ಬೆಂಗಳೂರು ನಗರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಲ್ಪಡುವ ಸಂಸ್ಥೆಗಳ ಮುಖಾಂತರ ಟಿ.ವಿ./ಡಿ.ವಿ.ಡಿ./ವಿ.ಸಿ.ಡಿ. ದುರಸ್ಥಿ ತರಬೇತಿಯನ್ನು ಪ.ಜಾ/ಪ.ಪಂ.ದವರಿಗೆ ನೀಡಲಾಗುವುದು.

**<u>ಅ. ಅರ್ಹತೆಗಳು:</u>**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).

2. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಉತ್ತೀರ್ಣ/ಅನುತ್ತೀರ್ಣರಾಗಿರಬೇಕು. (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪತ್ರ ಲಗತ್ತಿಸಿರಬೇಕು)

3. ಅಭ್ಯರ್ಥಿಯ ವಯಸ್ಸು, 18 ರಿಂದ 40ರೊಳಗೆ ವಯೋಮಿತಿಯಲ್ಲಿರಬೇಕು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪತ್ರ ಲಗತ್ತಿಸಿರಬೇಕು)

4. ಪರಿಶಿಷ್ಠ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

5. ತರಬೇತಿ ಮದ್ಯೆ ತರಬೇತಿಯನ್ನು ಬಿಡದಿರುವ ಬಗ್ಗೆ / ತರಬೇತಿಯನ್ನು ಮದ್ಯದಲ್ಲೇ ಬಿಟ್ಟರೆ ತರಬೇತಿಗಾಗಿ ಪಾಲಿಕೆಯು ವ್ಯಯ ಮಾಡಿರುವ ಹಣವನ್ನು ತುಂಬಿಕೊಡುವ ಬಗ್ಗೆ ಘೋಷಣೆ ಪತ್ರವನ್ನು ರೂ.20.00 ಛಾಪಾ ಕಾಗದಲ್ಲಿ ಮುಚ್ಚಳಿಕೆ ಪತ್ರ ಹಾಗೂ ಈ ಹಿಂದೆ ಸದರಿ ತರಬೇತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗಗಳ ಇಲಾಖೆ ಅಥವಾ ಇತರೆ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಸಮಾಜ

ಕಲ್ಯಾಣಾಧಿಕಾರಿ/ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಬೇಕು. ಈ ರೀತಿಯ ಸೌಲಭ್ಯವನ್ನು ಪಡೆದವರು ತರಬೇತಿಗೆ ಅರ್ಹರಾಗಿರುವುದಿಲ್ಲ.

6. ಅರ್ಜಿದಾರರು 5 ಭಾವ ಚಿತ್ರಗಳನ್ನು ಅರ್ಜಿಯೊಂದಿಗೆ ನೀಡಬೇಕು.(ಗುರುತಿನ ಚೀಟಿ, ವಲಯ ಕಚೇರಿಯ ರಿಜಿಸ್ಟರ್, ತರಬೇತಿಯ ಸಂಸ್ಥೆಯ ರಿಜಿಸ್ಟರ್ ಮತ್ತು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುವ ಅಂತಿಮ ಪಟ್ಟಿ)

7. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1–00 ಲಕ್ಷ (ಒಂದು ಲಕ್ಷ ರೂಪಾಯಿಗಳು) ಮೀರಿರಬಾರದು.

**ಆ. ಆಯ್ಕೆ ವಿಧಾನ:**

ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಯ ಆದಾರದ ಮೇಲೆ ಗುರಿಯನ್ನು ನಿಗದಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

- **i. ವಲಯ ಜಂಟಿ ಆಯುಕ್ತರು –ಅಧ್ಯಕ್ಷರು**
- **ii. ವಲಯ ಉಪ ಆಯುಕ್ತರು –ಉಪಾಧ್ಯಕ್ಷರು**
- **iii. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಒರ್ವ ಪ್ರತಿನಿಧಿ – ಸದಸ್ಯರು**
- **ಃ ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ**

ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಆದ್ಯತೆ ನೀಡುವುದು.
ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಯಾವುದೇ ಆಕ್ಷೇಪಣೆಗಳಿಗೆ 07 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

ಶೇ.10 ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

ಪ್ರಥಮ ಪಟ್ಟಿಯಲ್ಲಿ ನಿಯೋಜಿಸಲಾದ ಅಭ್ಯರ್ಥಿಗಳು ತರಬೇತಿಯ ಪ್ರಥಮ ವಾರದಲ್ಲಿ ತರಬೇತಿಗೆ ಹಾಜರಾಗದಿದ್ದಲ್ಲಿ, ಹೆಚ್ಚುವರಿ ಆಯ್ಕೆ

ಪಟ್ಟಿಯಿಂದ ಮೆರಿಟ್ ಆದಾರದಲ್ಲಿಯೇ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದು.

**<u>ಇ. ತರಬೇತಿಯ ವಿವರಗಳು:</u>**

a. ಅಭ್ಯರ್ಥಿಯು ಶೇ.90 ಕ್ಕು ಮೇಲ್ಪಟ್ಟು ಹಾಜರಾತಿಯನ್ನು ಕಡ್ಡಾಯವಾಗಿ ಇರತಕ್ಕದ್ದು.
b. ಅಭ್ಯರ್ಥಿಯು ತರಬೇತಿ ನೀಡುವ ಸಂಸ್ಥೆಯು ಕಾಲಕಾಲಕ್ಕೆ ನಡೆಸುವ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.
c. ತರಬೇತಿಯ ನಂತರ ಸಂಬಂಧಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.
d. ಅಭ್ಯರ್ಥಿಯು ಪರೀಕ್ಷೆಯ ಪ್ರವೇಶ ಪತ್ರದ ಜೆ಼ರಾಕ್ಸ್ ಪ್ರತಿಯನ್ನು ಸಂಬಂಧ ಪಟ್ಟ ಪಾಲಿಕೆಯ ವಲಯ ಕಛೇರಿಗೆ ಕಡ್ಡಾಯವಾಗಿ ನೀಡಬೇಕು.

**<u>ಈ. ಕಾರ್ಯಕ್ರಮ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸುವುದು.</u>**

**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಲ್ಯಾಣ ಕಾರ್ಯಕ್ರಮಗಳು

**ಸರ್ಕಾರದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಭೋದನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಮರುಪಾವತಿ ಮತ್ತು ನೋಟ್ ಪುಸ್ತಕಗಳು, ಲೇಖನ ಸಾಮಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳ ಖರೀದಿಯ ಮರುಪಾವತಿ – ಮಾರ್ಗಸೂಚಿಗಳು:–**

**Re-imbursement of Admission Fees, Tuition Fees, Examination Fees & Expenditure made towards the purchase of Books, Stationeries, Uniform, Learning Aids for Post Metric Students in Govt. Collages.**

### P) ಕಾರ್ಯಕ್ರಮದ ಉದ್ದೇಶ:–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಕಡು ಬಡವರಾದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಸರ್ಕಾರಿ/ಸರ್ಕಾರದ ಅನುದಾನಿತ ಡಿಪ್ಲೊಮೊ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ (ಪ್ರೊಫೇಶನಲ್ ಕೋರ್ಸ್‌ಗಳು ಹಾಗೂ ಉನ್ನತ ವ್ಯಾಸಂಗವು ಒಳಗೊಂಡಂತೆ) ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ವೆಚ್ಚಗಳನ್ನು ಪಾಲಿಕೆಯಿಂದ ಭರಿಸಿ ಅವರನ್ನು ಶೈಕ್ಷಣಿಕವಾಗಿ ವೃದ್ಧಿಪಡಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

### Q) ಕಾರ್ಯಕ್ರಮದ ವಿವರಣೆ:–

ಸರ್ಕಾರಿ/ಸರ್ಕಾರದ ಅನುದಾನಿತ ಡಿಪ್ಲೊಮೊ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ (ಪ್ರೊಫೇಶನಲ್ ಕೋರ್ಸ್‌ಗಳು ಹಾಗೂ ಉನ್ನತ ವ್ಯಾಸಂಗವು ಒಳಗೊಂಡಂತೆ) ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿಗೆ ಪ್ರವೇಶ ಶುಲ್ಕ, ಭೋಧನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ ಹಾಗೂ ನೋಟ್ ಪುಸ್ತಕಗಳು, ಲೇಖನ ಸಾಮಾಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳನ್ನು ಖರೀದಿಸಿದ್ದಲ್ಲಿ ಅದನ್ನು ಪಾಲಿಕೆಯಿಂದ ಮರುಪಾವತಿ ಮಾಡಲಾಗುವುದು.

### R) ಅರ್ಹತೆಗಳು:–

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).
2. ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.

**2ನೇ ಪುಟಕ್ಕೆ---**

3. ಕುಟುಂಬದ ವಾರ್ಷಿಕ ಆದಾಯವು ರೂ.1.00 ಲಕ್ಷಗಳಿಗೆ ಮೀರಿರಬಾರದು. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು ಅಥವಾ ಬಿ.ಪಿ.ಎಲ್. ಕುಟುಂಬ ವರ್ಗದವರ ಮಕ್ಕಳು ಅರ್ಹರಾಗಿರುತ್ತಾರೆ.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವುದಕ್ಕೆ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
5. ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದಂತೆ ತಾಂತ್ರಿಕ, ವೈದ್ಯಕೀಯ ಪ್ರೊಫೆಷನಲ್ ಹಾಗೂ ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಭೋದನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಮರುಪಾವತಿ ಮಾಡುವುದು.

**<u>ಕಾಲೇಜು ಶುಲ್ಕಗಳ ವಿವರಗಳು:-</u>**

| ಕ್ರ. ಸಂ. | ವ್ಯಾಸಂಗದ ವಿವರಗಳು | ಆಯಾ ಕೋರ್ಸ್‌ಗಳ ಪೂರ್ಣಾವಧಿಗೆ ನಿಗಧೀಪಡಿಸಿರುವ ಗರಿಷ್ಠ ಆರ್ಥಿಕ ಸಹಾಯದ ಮೊತ್ತ |
|---|---|---|
| 1 | 3 ವರ್ಷಗಳ ಡಿಪ್ಲೊಮೋ ಕೋರ್ಸ್ | ರೂ.1.00 ಲಕ್ಷಗಳು |
| 2 | 4 ವರ್ಷಗಳ ಪದವಿ ಕೋರ್ಸ್‌ಗಳು | ರೂ.2.00 ಲಕ್ಷಗಳು |
| 3 | 5 ವರ್ಷಗಳ ವೃತ್ತಿಪರ ಹಾಗೂ ಉನ್ನತ ವ್ಯಾಸಂಗದ ಕೋರ್ಸ್‌ಗಳು | ರೂ.3.00 ಲಕ್ಷಗಳು |

6. ವಿದ್ಯಾರ್ಥಿಗಳು ಸರ್ಕಾರಿ/ಸರ್ಕಾರದ ಅನುದಾನಿತ ಡಿಪ್ಲೊಮೊ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ (ಪ್ರೊಫೇಶನಲ್ ಕೋರ್ಸ್‌ಗಳು ಹಾಗೂ ಉನ್ನತ ವ್ಯಾಸಂಗವು ಒಳಗೊಂಡಂತೆ) ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.
7. ಕಾಲೇಜು ಮುಖ್ಯಸ್ಥರು ಅನುಮೋದಿತ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವುದು.
8. ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ಧೃಡೀಕರಣವನ್ನು ರೂ.20/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸಹಾಯ ಧನಕ್ಕೆ ಅರ್ಹರಾಗಿರುವುದಿಲ್ಲ.
9. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

**S) <u>ಆಯ್ಕೆ ವಿಧಾನ:-</u>**

xxix) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಸಂಬಂಧಿತ ಶಾಲೆಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಟ್ಟಿಯನ್ನು ಪಡೆಯುವುದು. ಶಾಲಾ/ಕಾಲೇಜು ಮುಖ್ಯಸ್ಥರುಗಳು ಸರ್ಕಾರಗಳಿಂದ ಒದಗಿಸಿರುವ ಸೌಲಭ್ಯಗಳಿಗಿಂತ ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿಗೆ ನೀಡಬೇಕಾಗಿರುವ ಸೌಲಭ್ಯಗಳ ಸವಿವರಗಳನ್ನು ನಮೂದಿಸಿ, ಧೃಢೀಕರಿಸಿದ ಪಟ್ಟಿಯನ್ನು ಪಡೆಯುವುದು.

xxx) ಆಯಾಯ ವಲಯಗಳಲ್ಲಿನ ಪ್ರತಿ ವಾರ್ಡಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

**3ನೇ ಪುಟಕ್ಕೆ ----**

xxxi) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

xxxii) ಈ ಕಾರ್ಯಕ್ರಮದಡಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಾಲಾತಿಯನ್ನು ಕಡ್ಡಾಯವಾಗಿ ನೀಡಬೇಕು.

xxxiii) ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ | – | ಸದಸ್ಯರು |
| 4. ಉಪ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | – | ಸದಸ್ಯರು |
| 5. ಜಿಲ್ಲಾ/ತಾಲೂಕು ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

xxxiv) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

xxxv) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

xxxvi) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

xxxvii) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

xxxviii) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

## E) ಸೌಲಭ್ಯಗಳ ವಿವರಗಳು:-

**1.** ಸರ್ಕಾರದ ವತಿಯಿಂದ ಪಾವತಿಸದೇ ಇರುವಂತಹ ಪ್ರವೇಶ ಶುಲ್ಕ, ಭೋಧನಾ ಶುಲ್ಕ, ಪರೀಕ್ಷಾ ಶುಲ್ಕವನ್ನು ಪಾವತಿಸಿರುವ ಬಗ್ಗೆ ರಸೀದಿಯ ನಕಲುಗಳು ಅಥವಾ ಕಾಲೇಜುಗಳ ಮುಖ್ಯಸ್ಥರುಗಳು ಪಾವತಿ ಮಾಡಬೇಕಾದ ಶುಲ್ಕದ ವಿವರಗಳ ಪಟ್ಟಿಯನ್ನು ವಲಯ ಕಛೇರಿಗಳಿಗೆ ಅದನ್ನು ಸಲ್ಲಿಸದ್ದಲ್ಲಿ ಕಾಲೇಜು ಶುಲ್ಕವನ್ನು ಪಾವತಿಸುವುದು.

**2.** ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 192 ಪುಟಗಳ ಒಟ್ಟು 15 ಲಾಂಗ್‌ನೋಟ್ ಪುಸ್ತಕಗಳನ್ನು ನೀಡುವುದು. (ಮೆ॥ ಎಂ.ಎಸ್.ಐ.ಎಲ್. ಸಂಸ್ಥೆಯ ವಿದ್ಯಾ ಪುಸ್ತಕಗಳ ದರಗಳಲ್ಲಿ)

**ವಿಶೇಷ / ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ.18ರ ಅನುದಾನದಡಿಯ ಕಲ್ಯಾಣ ಕಾರ್ಯಕ್ರಮಗಳು

### ವೈದ್ಯಕೀಯ ಸಹಾಯ/ಸೇವೆಗಳು, ದೌರ್ಜನ್ಯ, ಗಲಭೆ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ – ಪರಿಷ್ಕೃತ ಮಾರ್ಗಸೂಚಿಗಳು

### A. ಕಾರ್ಯಕ್ರಮದ ಉದ್ದೇಶ:–

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ದೌರ್ಜನ್ಯ, ಗಲಭೆ ಮತ್ತು ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ವೈದ್ಯಕೀಯ ಸಹಾಯ ಹಾಗೂ ಪರಿಹಾರ ಒದಗಿಸುವುದು ಮತ್ತು ಗಂಭೀರ ಸ್ವರೂಪದ ಕಾಯಿಲೆಗಳು ಹಾಗೂ ಮಾರಣಾಂತಿಕ ರೋಗಗಳಾದ ಹೃದಯ ರೋಗ, ಕಿಡ್ನಿ ವೈಪಲ್ಯ ಹಾಗೂ ಕ್ಯಾನ್ಸರ್‌ಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರದಲ್ಲಿಯೂ ಸಹ ಈ ಬಗ್ಗೆ ಪರಿಹಾರ ನೀಡುತ್ತಿದ್ದರು, ಸ್ಥಳೀಯ ಸಂಸ್ಥೆಗಳಲ್ಲಿ ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕೆಂದು ಸರ್ಕಾರದ ಸುತ್ತೋಲೆಯ ಸೂಚನೆಗಳನ್ವಯ ಕಾರ್ಯಕ್ರಮವನ್ನು ಅಳವಡಿಸಲಾಗಿದೆ.

### B. ಕಾರ್ಯಕ್ರಮದ ವಿವರಣೆ:–

ಸದರಿ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರವನ್ನು ನೀಡಲಾಗುವುದು. ಗಲಭೆ, ದೊಂಬಿ ಇತ್ಯಾದಿಗಳು ಹಾಗೂ ನೈಸರ್ಗಿಕ ವಿಕೋಪಗಳಲ್ಲಿ ತೊಂದರೆಗೊಳಗಾದ ವ್ಯಕ್ತಿಗಳು ಹಾಗೂ ಕುಟುಂಬದ ಸದಸ್ಯರಿಗೆ ಅಗತ್ಯ ಸೌಲಭ್ಯಗಳನ್ನು ವೈದ್ಯಕೀಯ ಹಾಗೂ ಕಂದಾಯ ಇಲಾಖೆಗಳ ಶಿಫಾರಸ್ಸಿನ ಮೇರೆಗೆ ಒದಗಿಸಬಹುದಾಗಿದೆ.

ಗಂಭೀರ ಸ್ವರೂಪದ ಕಾಯಿಲೆಗಳು ಹಾಗೂ ಮಾರಣಾಂತಿಕ ರೋಗಗಳಾದ ಹೃದಯ ರೋಗ, ಕಿಡ್ನಿ ವೈಪಲ್ಯ ಹಾಗೂ ಕ್ಯಾನ್ಸರ್‌ಗಳಿಂದ ಬಳಲುತ್ತಿರುವ ಕಡುಬಡತನದಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಅದರ ವೆಚ್ಚದ ಮರುಪಾವತಿ ಅಥವಾ ಆಸ್ಪತ್ರೆಗಳಿಂದ ನೀಡಿರುವ ವರದಿಗಳ ಆಧಾರದ ಮೇಲೆ ಅದರ ವೆಚ್ಚವನ್ನು ಭರಿಸಲಾಗುವುದು.

### C. ಅರ್ಹತೆಗಳು:–

a. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು).

b. ಕೊಳಚೆ ಪ್ರದೇಶಗಳಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮೊದಲ ಆದ್ಯತೆ ನೀಡುವುದು.

c. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

d. ಗಲಭೆಯಾಗಿ ತೊಂದರೆಗೊಳಗಾದವರು ಪೊಲೀಸ್ ಇಲಾಖೆಯಿಂದ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಬೇಕು (FIR).

e. ಗಲಭೆಯಿಂದ ಆದ ಗಾಯ, ಅಂಗವಿಕಲತೆ ಹಾಗೂ ಶಾರೀರಿಕ ತೊಂದರೆಯಾಗಿರುವುದಕ್ಕೆ ಸರ್ಕಾರಿ ಆಸ್ಪತ್ರೆ ವೈದ್ಯರಿಂದ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

f. ಗಂಭೀರ ಸ್ವರೂಪದ ಕಾಯಿಲೆಗಳು ಹಾಗೂ ಮಾರಣಾಂತಿಕ ರೋಗಗಳಾದ ಹೃದಯ ರೋಗ, ಕಿಡ್ನಿ ವೈಫಲ್ಯ ಹಾಗೂ ಕ್ಯಾನ್ಸರ್ ಪೀಡಿತರಾದವರು ಆರ್ಥಿಕ ಸಹಾಯಕ್ಕಾಗಿ ಅರ್ಹರಾಗಿರುತ್ತಾರೆ.

g. ಈ ಮೇಲೆ ತಿಳಿಸಿರುವ ಕಾಯಿಲೆಗಳಿಂದ ಪೀಡಿತರಾದವರು ಸಂಭವಿಸಬಹುದಾದ ಅಂದಾಜು ವೆಚ್ಚದ ವಿವರಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳ ವೈದ್ಯರುಗಳಿಂದ ದೃಢೀಕರಣ ಪತ್ರ ಅಥವಾ ಈಗಾಗಲೇ ವೆಚ್ಚವಾಗಿರುವ ಬಿಲ್ ವೋಚರ್‌ಗಳ ದಾಖಲೆಗಳ ಮೂಲ ಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

h. ಈ ವೈದ್ಯಕೀಯ ಸೌಲಭ್ಯವನ್ನು ಪಡೆಯುವವರು ಕಡುಬಡವಾಗಿದ್ದು ಬಿ.ಪಿ.ಎಲ್. ಕಾರ್ಡ್ ಹೊಂದಿರಬೇಕು.

i. ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಸೌಲಭ್ಯವನ್ನು ಪಡೆದಿರುವವರು ಅರ್ಹರಾಗಿರುವುದಿಲ್ಲ.

## D. ಆಯ್ಕೆ ವಿಧಾನ:–

ಅ) ವಲಯ ಮಟ್ಟದ ಈ ಕೆಳಕಂಡ ಹಿರಿಯ ಅಧಿಕಾರಿಗಳ ಸಮಿತಿಯ ಆಯ್ಕೆ ಮಾಡಲಾಗುವುದು.

| | | |
|---|---|---|
| 1. ವಲಯ ಅಪರ/ಜಂಟಿ ಆಯುಕ್ತರು | – | ಅಧ್ಯಕ್ಷರು |
| 2. ವಲಯ ಉಪ ಆಯುಕ್ತರು | – | ಉಪಾಧ್ಯಕ್ಷರು |
| 3. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| 4. ವಲಯದ ಕಂದಾಯಾಧಿಕಾರಿಗಳು | – | ಸದಸ್ಯರು |
| 5. ವಲಯದ ಆರೋಗ್ಯಾಧಿಕಾರಿಗಳು | – | ಸದಸ್ಯರು |
| 6. ವಲಯದ ಕಲ್ಯಾಣಾಧಿಕಾರಿ | – | ಸದಸ್ಯ ಕಾರ್ಯದರ್ಶಿ |

## E. ಆರ್ಥಿಕ ಸಹಾಯದ ಬಿಡುಗಡೆಯ ವಿವರಗಳು:–

a. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೊರಡಿಸಿರುವ ಸುತ್ತೋಲೆಗಳನ್ವಯ ಪರಿಹಾರವನ್ನು ನೀಡುವುದು.

b. ನೈಸರ್ಗಿಕ ವಿಕೋಪಕ್ಕೊಳಗಾದವರು ರಾಜ್ಯ ಸರ್ಕಾರ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇತರೆ ಇಲಾಖೆಗಳಿಂದ ಪರಿಹಾರವನ್ನು ಪಡೆಯದೇ ಇರುವ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಕಲ್ಯಾಣ ಶಾಖೆಯಿಂದ ಪರಿಹಾರವನ್ನು ನೀಡುವುದು.

c. ರಾಜ್ಯ ಸರ್ಕಾರದ ಕಂದಾಯ ಇಲಾಖೆಯಿಂದ ಹೊರಡಿಸಲಾಗಿರುವ ಸುತ್ತೋಲೆಗಳನ್ವಯ ಪರಿಹಾರವನ್ನು ಬಿಡುಗಡೆ ಮಾಡುವುದು.

d. ಕರ್ನಾಟಕ ಸರ್ಕಾರಿ ಸೇವಕರ (Medical Attendance) ನಿಯಮಗಳು 1963ರ ಅಧಿಸೂಚನೆ GAD7OMR63 Dt:25-03-1963ರಡಿಯಲ್ಲಿ ವೈದ್ಯಕೀಯ ಪರಿಹಾರವನ್ನು ನೀಡುವುದು.

**ಅಪರ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಕಲ್ಯಾಣ ಇಲಾಖೆಯ ಚಟುವಟಿಕೆಗಳು

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ.22.75ರ ಅನುದಾನದಡಿಯ ಕಾರ್ಯಕ್ರಮಗಳು

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು/ವಸತಿ ಶಾಲೆಗಳಿಗೆ ಅನುದಾನ – ಮಾರ್ಗಸೂಚಿಗಳು**

**ಕಾರ್ಯಕ್ರಮದ ಉದ್ದೇಶ:–**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಏಳಿಗೆಗಾಗಿ ಶ್ರಮಿಸುತ್ತಿರುವ ಶಿಕ್ಷಣ ಸಂಸ್ಥೆಗಳು/ವಸತಿ ಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುದಾನವನ್ನು ನೀಡುವ ಉದ್ದೇಶ ಹೊಂದಿರುತ್ತದೆ.

**ಕಾರ್ಯಕ್ರಮದ ವಿವರಣೆ:–**

ಸರ್ಕಾರದಿಂದ ಮಾನ್ಯತೆ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು ಹಾಗೂ ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ನೀಡಲಾಗುವುದು. ನಿವೇಶನವನ್ನು ಹೊಂದಿರುವ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚದ ಶೇ.75ರಷ್ಟನ್ನು ಅಥವಾ ಗರಿಷ್ಠ ರೂ.10.00 ಲಕ್ಷಗಳ ಅನುದಾನವನ್ನು ನೀಡಲಾಗುವುದು.

**ಅ. ಅರ್ಹತೆಗಳು:–**

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಆಡಳಿತ ಮಂಡಳಿಯು ನಡೆಸುತ್ತಿರುವ ಶಿಕ್ಷಣ ಸಂಸ್ಥೆ/ವಸತಿ ಶಾಲೆ/ನಿವೇಶನವು ಸಹ ಪಾಲಿಕೆಯ ವ್ಯಾಪ್ತಿಯಲ್ಲಿರಬೇಕು.
2) ಆಡಳಿತ ಮಂಡಳಿಯು ಸಮಾಜ ಕಲ್ಯಾಣ ಇಲಾಖೆ ಅಥವಾ ಇತರೆ ಸರ್ಕಾರೇತರ ಪ್ರಾಧಿಕಾರದಿಂದ ಈ ಹಿಂದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಅನುದಾನ ಪಡೆಯದೇ ಇರುವ ಬಗ್ಗೆ ದೃಢೀಕರಣ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
3) ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಂಸ್ಥೆಯು ನೊಂದಣಿಯಾಗಿರಬೇಕು.
4) ನೊಂದಾಯಿತ ಮಾನ್ಯತೆ ಪಡೆದ ಸಂಸ್ಥೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಕ್ಷಣ/ವಸತಿ ಸೌಲಭ್ಯ ನೀಡುವ ಉದ್ದೇಶವನ್ನು ಸಂಸ್ಥೆಯ ಉಪ ನಿಯಮಗಳಲ್ಲಿ ಕಡ್ಡಾಯವಾಗಿ ಇರಬೇಕಾಗುತ್ತದೆ.
5) ಕಟ್ಟಡ ನಿರ್ಮಾಣಕ್ಕೆ ಕಾಯ್ದಿರಿಸಿರುವ ನಿವೇಶನವು ಸಂಬಂಧಪಟ್ಟ ಸಂಸ್ಥೆಗೆ ನೊಂದಣಿಯಾಗಿರಬೇಕು. ಖಾತೆ ನೊಂದಣಿಯಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ತೆರಿಗೆಯನ್ನು/ಕಂದಾಯವನ್ನು ಪಾವತಿಸಿರಬೇಕು.
6) ಕಟ್ಟಡ ನಿರ್ಮಾಣ ಮಾಡಲು ನಕ್ಷೆ ಹಾಗೂ ಅಂದಾಜು ವೆಚ್ಚವನ್ನು ಸರ್ಕಾರದ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆಡಳಿತ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಅಂಗೀಕೃತವಾಗಿರಬೇಕು.
7) ಕೊಳಚೆ ಪ್ರದೇಶದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.

**ಆ. ಆಯ್ಕೆ ವಿಧಾನ:-**

ಅ) ಅನುದಾನವನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ನೀಡುವುದು.

ಆ) ಆಯಾಯ ವಲಯಗಳಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.

ಇ) ಅರ್ಹ ಸಂಸ್ಥೆಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

ಈ) ವಲಯವಾರು ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸುವುದು.

1. ವಲಯ ಜಂಟಿ ಆಯುಕ್ತರು – ಅಧ್ಯಕ್ಷರು
2. ವಲಯ ಉಪ ಆಯುಕ್ತರು – ಉಪಾಧ್ಯಕ್ಷರು
3. ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿಧಿ– ಸದಸ್ಯರು
4. ವಲಯದ ಕಲ್ಯಾಣಾಧಿಕಾರಿ – ಸದಸ್ಯರು
5. ವಲಯದ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರು – ಸದಸ್ಯ ಕಾರ್ಯದರ್ಶಿ

ಉ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ಪ್ರಕಟಿಸುವುದು.

ಊ) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

ಋ) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

**ಇ. ಅನುದಾನದ ಬಿಡುಗಡೆಯ ವಿಧಾನಗಳು:-**

1) ಕಟ್ಟಡ ನಿರ್ಮಾಣದ ಪ್ರಗತಿಯ ಹಂತಗಳನ್ನು ಸಂಬಂಧಪಟ್ಟ ಪ್ರಾಧಿಕಾರ ಶಿಫಾರಸ್ಸು ಮಾಡಿದಲ್ಲಿ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು.
2) ಶಿಕ್ಷಣ ಇಲಾಖೆಯಿಂದ ತೃಪ್ತಿಕರ ಪ್ರಮಾಣ ಪತ್ರ ಹಾಗೂ ಈ ಹಿಂದಿನ ಅನುದಾನದ ಬಿಡುಗಡೆಗೆ ಬಳಕೆ ಪ್ರಮಾಣ ಪತ್ರ ಸಲ್ಲಿಸಬೇಕು, ಅಲ್ಲದೆ ವಿದ್ಯಾರ್ಥಿಗಳ ಶೈಕ್ಷಣಿಕ ವಸತಿ ಸೌಲಭ್ಯಕ್ಕೆ ಬಳಕೆ ಮಾಡಲಾಗುತ್ತಿದೆ ಎಂದು ತಿಳಿಸಿದಲ್ಲಿ ಅಂತಿಮ ಹಂತದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.
3) ಅನುದಾನವನ್ನು ಪಡೆದ ಸಂಸ್ಥೆಗಳು ಕಡ್ಡಾಯವಾಗಿ ಉಪಯುಕ್ತತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

**(ಸಹಿ/-)**
**ವಿಶೇಷ ಆಯುಕ್ತರು (ಆಡಳಿತ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**